# ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 72 RNI Number : KNKAN/25/A2770 21-03-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :72 ರಾಯಚೂರು 21-03-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563


# ಶಾಮನೂರು ಮೊಮ್ಮಗ ಕಣಕ್ಕೆ; ನಾಮಪತ್ರ ಸಲ್ಲಿಸಿದ ಸಮರ್ಥ್

ದಾವಣಗೆರೆ,ಮಾ.20-

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಗೆ ಶಾಮನೂರು ಕುಟುಂಬದ ಕುಡಿ ಕಣಕ್ಕೆ ಇಳಿದಿದೆ. ಅಧಿಕೃತವಾಗಿ ಕಾಂಗ್ರೆಸ್ ಟಿಕೆಟ್ ಘೋಷಣೆ ಮುನ್ನವೇ ಇಂದು ಸಮರ್ಥ್ ಶಾಮನೂರು ನಾಮಪತ್ರ ಸಲ್ಲಿಸಿದ್ದಾರೆ.

ತಾತನ ಕಾರಲ್ಲೇ ನಾಮಪತ್ರ ಸಲ್ಲಿಸಲು ಬಂದ ಮೊಮ್ಮಗ: ದಾವಣಗೆರೆ ದಕ್ಷಿಣ ಕ್ಷೇತ್ರ ಪ್ರತಿನಿಧಿಸಿದ್ದ ಶಾಮನೂರು ಶಿವಶಂಕರಪ್ಪ ಅವರ ಅಗಲಿಕೆಯ ನಂತರ ಕಳೆದ 5 ತಿಂಗಳಿನಿಂದ ನಿಂತಲ್ಲೇ ನಿಂತಿದ್ದ ಶಿವಶಂಕರಪ್ಪ ಅವರ ಕಾರಿನಲ್ಲೇ ಇಂದು ನಾಮಪತ್ರ ಸಲ್ಲಿಸಲು ಸಮರ್ಥ್ ತಮ್ಮ ತಾಯಿ ಜೊತೆ ಪಾಲಿಕೆ ಕಚೇರಿಗೆ ಆಗಮಿಸಿದರು.

ತಾತನ ಕಾರನ್ನು ಸ್ವಚ್ಛಗೊಳಿಸಿ ಪೂಜೆ ಮಾಡಿ, ಅದೇ ಕಾರಿನಲ್ಲಿ ಶುಭಗಳಿಗೆಯಲ್ಲಿ ತಾಯಿ ಪ್ರಭಾ ಮಲ್ಲಿಕಾರ್ಜುನ ಅವರ ಜೊತೆಗೆ ಅಜ್ಜಿ ಮನೆಗೆ ತೆರಳಿ ಅಜ್ಜಿಯ ಆಶೀರ್ವಾದ ಪಡೆದರು. ಬಳಿಕ ಅಲ್ಲಿಂದ ನೇರವಾಗಿ ಮಹಾನಗರ ಪಾಲಿಕೆ ಆವರಣದಲ್ಲಿರುವ ಚುನಾವಣಾಧಿಕಾರಿಗಳ ಕಚೇರಿಗೆ ಆಗಮಿಸಿ, ಎಸಿ ಹಾಗೂ ಚುನಾವಣಾಧಿಕಾರಿ ಸಂತೋಷ್ ಅವರಿಗೆ ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್ ಕಟ್ಟಿರುವುದೇ ಅಪ್ಪಾಜಿ, ಕಾಂಗ್ರೆಸ್‌ನಿಂದಲೇ ನಾಮಪತ್ರ ಸಲ್ಲಿಕೆ: ತಾಯಿ ಪ್ರಭಾ ಮಲ್ಲಿಕಾರ್ಜುನ್ ಜೊತೆ ಸಮರ್ಥ್ ಶಾಮನೂರು ಅವರು ಅಪ್ಪಟ ದೇಸಿ ಸಾಂಪ್ರದಾಯಿಕ ಉಡುಗೆಯಲ್ಲಿ ನಾಮಪತ್ರ ಸಲ್ಲಿಸಲು ಹೊರಡುವ ಮುನ್ನ ಮಾಧ್ಯಮದವರ ಜೊತೆ ಮಾತನಾಡಿದರು. ಬಿ ಫಾರಂ ಸಿಗುವ ಭರವಸೆಯಲ್ಲಿ ನಾಮಪತ್ರ ಸಲ್ಲಿಕೆ ಮಾಡುತ್ತಿದ್ದೇನೆ. ಕಾಂಗ್ರೆಸ್ ಕಟ್ಟಿರುವುದೇ ಅಪ್ಪಾಜಿ ಶಾಮನೂರು ಅವರು. ಹೀಗಾಗಿ ನಾನು ಕಾಂಗ್ರೆಸ್ ನಿಂದಲೇ ನಾಮಪತ್ರ ಸಲ್ಲಿಸುತ್ತಿರುವೆ ಎಂದರು.

ಇವತ್ತು ಯುಗಾದಿ ಮತ್ತು ರಂಜಾನ್ ಹಬ್ಬ ಇದೆ. ಆದ್ದರಿಂದ ಎರಡು ಹಬ್ಬದ ಶುಭ ಘಳಿಗೆ ಹಿನ್ನೆಲೆ ನಾಮಪತ್ರ ಸಲ್ಲಿಕೆ ಮಾಡ್ತಿದ್ದೇನೆ. ಬೆಳಗ್ಗೆ ಮನೆ ದೇವರು ಕಲ್ಲೇಶ್ವರ ದೇವರು, ದುರ್ಗಾಂಭಿಕಾ ದೇವಿ ಆಶೀರ್ವಾದ ಪಡೆಯಲಾಗಿದೆ. ಕಾರ್ಯಕರ್ತರು ಎಲ್ಲರ ಆಶೀರ್ವಾದ ಪಡೆದು ನಾಮಪತ್ರ ಸಲ್ಲಿಕೆ ಮಾಡುತ್ತಿರುವೆ. ಅಲ್ಪಸಂಖ್ಯಾತರು ಸೇರಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಲಾಗುವುದು. ಕ್ಷೇತ್ರದಲ್ಲಿ ತಾತನಂತೆಯೇ ನಾನು ಸೇವೆ ಸಲ್ಲಿಸುತ್ತೇನೆ. ಬಿ ಫಾರಂ ಸಿಕ್ಕ ತಕ್ಷಣ ಸೋಮವಾರ ಅಧಿಕೃತವಾಗಿ ರಾಜ್ಯ ನಾಯಕರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಕೆ ಮಾಡಲಿದ್ದೇನೆ ಎಂದು ತಿಳಿಸಿದರು.

ಸಂಸದೆ ಪ್ರಭಾ ಮಲ್ಲಿಕಾರ್ಜುನ ಪ್ರತಿಕ್ರಿಯೆ: ಸಂಸದೆ ಪ್ರಭಾ ಮಲ್ಲಿಕಾರ್ಜುನ ಪ್ರತಿಕ್ರಿಯಿಸಿ, ಇವತ್ತು ಶುಭ ಮುಹೂರ್ತ ಇದೆ. ಒಂದು



ನಾಮಪತ್ರ ಸಾಂಕೇತಿಕವಾಗಿ ಸಲ್ಲಿಸುತ್ತಿದ್ದೇವೆ. ಅಧಿಕೃತವಾಗಿ ಪಕ್ಷದ ಬಿ ಫಾರಂ ಜೊತೆ ಸೋಮವಾರ ನಾಮಪತ್ರ ಸಲ್ಲಿಕೆ ಮಾಡುತ್ತೇವೆ. ಶಾಮನೂರು ಅವರು ಮಾಡಿದ ಕೆಲಸ ನಮಗೆ ಶ್ರೀರಕ್ಷೆ ಆಗಲಿದೆ. ಈಗ ಯುವಕರು ರಾಜಕೀಯಕ್ಕೆ ಬರಬೇಕು. ಜಾಗತಿಕ ಮಟ್ಟದಲ್ಲಿ ಅವರದೇ ಆದ ದೃಷ್ಟಿಕೋನ ಇರುತ್ತೆ ಎಂದು ಮಗನ ಸ್ಪರ್ಧೆ ಬಗ್ಗೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಅಲ್ಪಸಂಖ್ಯಾತ, ಕುರುಬ ಮುಖಂಡರ ಸಮ್ಮುಖದಲ್ಲಿ ನಾಮಪತ್ರ: ಪ್ರತಿ ಬಾರಿ ನಾಮಪತ್ರ ಸಲಿಸುವ ವೇಳೆ ಕುರುಬರು ಹಾಗೂ ಅಲ್ಪಸಂಖ್ಯಾತ ಸಮುದಾಯ ಮುಖಂಡರ ಜೊತೆ ಶಾಮನೂರು ಶಿವಶಂಕರಪ್ಪ ನಾಮಪತ್ರ ಸಲ್ಲಿಕೆ ಮಾಡುತ್ತಿದ್ದರು. ಅದೇ ರೀತಿ ಮೊಮ್ಮಗ ಸಮರ್ಥ್ ಕೂಡ ತಾತನ ಸಂಪ್ರದಾಯ ಮುಂದುವರಿಸಿದರು. ತಾಯಿ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಕಾಂಗ್ರೆಸ್ ಮುಖಂಡರಾದ ಕುರುಬ ಸಮುದಾಯದ ಗೋಣ್ಯಪ್ಪ , ಅಲ್ಪಸಂಖ್ಯಾತ ಸಮುದಾಯದ ಸಲೀಂ ಅಹಮ್ಮದ್ ಎಂಬುವರ ನೇತೃತ್ವದಲ್ಲಿ ಸಮರ್ಥ್ ನಾಮಪತ್ರ ಸಲ್ಲಿಸಿದರು.

## ಶ್ರೀ ಯಲ್ಲಮ್ಮ ದೇವಸ್ಥಾನ ನಿರ್ಮಾಣ ಅಡಿಗಲ್ಲು ಕಾಮಗಾರಿಗೆ ಪಾಪಾರೆಡ್ಡಿ ಚಾಲನೆ

ರಾಯಚೂರು, ಮಾ.20-ಯುಗಾದಿ ಹಬ್ಬದ ಪ್ರಯುಕ್ತ ರಾಯಚೂರಿನ ಪ್ರಸಿದ್ದ ಶ್ರೀಯಲ್ಲಮ್ಮ ದೇವಸ್ಥಾನ ಜೀರ್ಣೋದ್ಧಾರ ನಿರ್ಮಾಣ ಕಾಮಗಾರಿಗೆ ಮುನ್ನೂರು ಕಾಪು ಸಮಾಜದ ಮುಖಂಡರು ಹಾಗೂ ಮಾಜಿ ಶಾಸಕರಾದ ಎ.ಪಾಪಾರೆಡ್ಡಿ ಅವರು ಗುರುವಾರ ಚಾಲನೆ ನೀಡಿದರು. ಯುಗಾದಿ ಹಬ್ಬದ ಪ್ಯಾಡ



ದಿನದಂದು ದೇವಸ್ಥಾನ ನಿರ್ಮಾಣ ಕಾಮಗಾರಿಗೆ ವಿವಿಧ ಧಾರ್ಮಿಕ ಪೂಜೆ ನೆರವೇರಿಸಲಾಯಿತು. ಪಾಪಾರೆಡ್ಡಿ ಅವರು ತಮ್ಮ ಸ್ವಂತ ವೆಚ್ಚದಲ್ಲಿ ಶ್ರೀ ಯಲ್ಲಮ್ಮ ದೇವಸ್ಥಾನ ನಿರ್ಮಾಣ ಮಾಡಲಿದ್ದಾರೆ. ಶ್ರೀ ಕೃಷ್ಣದೇವರಾಯ ವಂಶಸ್ಥರಾದ ಮುನ್ನೂರು ಕಾಪು ಸಮಾಜದ ಕೃಷ್ಣದೇವರಾಯ ಕಾಲದಲ್ಲಿ ದೇವಸ್ಥಾನ ನಿರ್ಮಾಣ ಶೀಲಾ ಮಂಟಪ, ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮ ನಡೆಸುತ್ತಿದ್ದರು. ಅದೇ ಮಾದರಿಯಲ್ಲಿ ಎ.ಪಾಪರೆಡ್ಡಿ ಅವರು ಕೂಡ ಮುಂಗಾರು ಸಾಂಸ್ಕತಿಕ ಹಬ್ಬ, ನವರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕಲ್ಯಾಣ ಮಂಟಪ ನಿರ್ಮಾಣ ಸೇರಿ ಅನೇಕ ದೇವಸ್ಥಾನಗಳ ನಿರ್ಮಾಣ ಮಾಡಿ ಸಾಂಸ್ಕೃತಿಕ ರಾಯಭಾರಿ ಎಂದೇ ಜಿಲ್ಲೆಯಲ್ಲಿ ಖ್ಯಾತಿಗೆ ಗುರಿಯಾಗಿದ್ದಾರೆ. ನಂತರ ಪಾಪಾರೆಡ್ಡಿ ಅವರು ಮಾತನಾಡಿ,ರಾಯಚೂರಿನ ಪ್ರಸಿದ್ಧ ಹಾಗೂ ಪುರಾತನ ಕಾಲದ ಶ್ರೀ ಯಲ್ಲಮ್ಮ ದೇವಸ್ಥಾನ ಜೀರ್ಣೋದರಕ್ಕಾಗಿ ನೂತನ ದೇವಸ್ಥಾನ ನಿರ್ಮಾಣ ಮಾಡಬೇಕು ಎಂದು ನಿರ್ಧರಿಸಲಾಗಿತ್ತು. ನಿರ್ಣಯದಂತೆ ಯುಗಾದಿ ಹಬ್ಬದ ದಿನದಂದು ಅಡಿಗಲ್ಲು ಕಾಮಗಾರಿ ಚಾಲನೆ ನೀಡಲಾಯಿತು.ನಮ್ಮ ಸಮಾಜದ ಪೂರ್ವಜರು ಹಾಗೂ ಎಲ್ಲಾ ಸಮುದಾಯದ ಸರ್ವ ಭಕ್ತರು ಗದ್ದಲ್ ಹುಣ್ಣಿಮೆಯ ನಿಮಿತ್ಯ ಪೂಜೆ ಕಾರ್ಯಕ್ರಮಗಳು ನಡೆಸಿಕೊಂಡ ಬಂದಿರುವ ಇತಿಹಾಸ ಪರಂಪರೆ ಹೊಂದಿದೆ.ಈ ಪರಂಪರೆಯನ್ನು ಮುಂದುವರಿಸುವ ಉದ್ದೇಶದಿಂದ ಹಾಗೂ ದೇವಸ್ಥಾನ ಅತ್ಯಂತ ಹಳೆಯದಾಗಿದ್ದು, ಭಕ್ತರ ಅನುಕೂಲಕ್ಕಾಗಿ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ

ಮೂರನೇಯ ಪುಟಕ್ಕೆ

## ದಿ. 25: ಹಳೆ ಮೀಸಲಾತಿ ಜಾರಿಗೆ ಆಗ್ರಹಿಸಿ ಬೆಂಗಳೂರಿನಲ್ಲಿ ಪ್ರತಿಭಟನಾ ಸಮಾವೇಶ

ರಾಯಚೂರು,ಮಾ.20-

ಒಳಮೀಸಲಾತಿ ರಹಿತ ಹಳೆ ಮೀಸಲಾತಿ ಜಾರಿಗೆ ಮಾಡಬೇಕು ಎಂದು ಆಗ್ರಹಿಸಿ ದಿ.25 ರಂದು ಬೆಂಗಳೂರಿನ ಫ್ರಿಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ಮುಖಂಡರಾದ ಭೀಮಣ್ಣ ಮಾಂಚಲಿ ಅವರು ಹೇಳಿದರು.



ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ನಮ್ಮ ನಡೆ ಸಮಾಜದ ಕಡೆ ಎಂಬ ಘೋಷಣೆಯೊಂದಿಗೆ ಬೆಂಗಳೂರಿನಲ್ಲಿ ನಡೆಯುವ ಬೃಹತ್ ಸಮಾವೇಶದಲ್ಲಿ ಜಿಲ್ಲೆಯ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.ನಂತರ ಕಾರ್ಯಾಧ್ಯಕ್ಷರಾದ ಈ.ಕುಮಾರ ಅವರು ಮಾತನಾಡಿ, ನ್ಯಾಗಮೋಹನ್ ದಾಸ್ ಅವರು ಸಮೀಕ್ಷೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸದೆ ಸುಪ್ರೀಂ ಕೋರ್ಟ್ ಆದೇಶದಂತೆ ಅಗತ್ಯ ಅಂಕಿ ಅಂಶಗಳನ್ನು ಕ್ರೋಢಿಕರಿಸದೇ ಕೇವಲ ಒಂದು ಜಾತಿಯನ್ನು ಒಲೈಕೆ ಮಾಡುವ ಉದ್ದೇಶದಿಂದ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಜನಸಂಖ್ಯೆಯನ್ನು 4 ಭಾಗಗಳಾಗಿ ವಿಂಗಡಿಸಿ ಸಮುದಾಯಕ್ಕೆ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು.

ನ್ಯಾಗಮೋಹನ್ ದಾಸ್ ವರದಿ ದೋಷಪೂರಿತದಿಂದ ಕೂಡಿದ್ದು, ಇದರಿಂದ ಬಲಗೈ ಸಮುದಾಯದ ಮೀಸಲಾತಿ ಸೌಲಭ್ಯ ವಂಚಿತಗೊಂಡಿದೆ ಎಂದರು. ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಯ ಬಲಗೈ ಸಮುದಾಯವನ್ನು ಗ್ರೂಫ್-ಬಿ'ಗೆ ಸೇರಿಸುವುದರ ಮೂಲಕ ಯಾವುದೇ ಉನ್ನತ ಹುದ್ದೆಗಳು ಹೊಲಯ,ಛಲವಾದಿ ಬಲಗೈ ಸಮುದಾಯಕ್ಕೆ ಸಿಗದಂತೆ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿದೆ ಎಂದರು. ಒಳಮೀಸಲಾತಿ ಜಾರಿ ಬಗ್ಗೆ ನಮ್ಮ ತಕರಾರು ಇಲ್ಲ, ಆದರೆ ರೋಸ್ಟರ್ ಬಿಂದು ಬಗ್ಗೆ ನಮ್ಮದು ತಕರಾರು ಇದ್ದು,ರಾಜ್ಯ ಸರಕಾರ ರೋಸ್ಟರ್ ಬಿಂದುನಲ್ಲಿ ಇರುವ ಅನೇಕ ಗೊಂದಲಗಳನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದರು.

ದೋಷಪೂರಿತ ನ್ಯಾಯಮೂರ್ತಿ ಆಯೋಗ ವರದಿಯನ್ನು ರಾಜ್ಯ ಸರಕಾರ ತಿರಸ್ಕಾರ ಮಾಡಬೇಕು. ಸೆ.3 2025 ರ ಹೊರಡಿಸಿದ ಮಿಸಲಾತಿ ಆದೇಶವನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.ಪರಿಶಿಷ್ಟ ಜಾತಿ

ಮೂರನೇಯ ಪುಟಕ್ಕೆ

## ದಿ.25ರಂದು ಒಳ ಮೀಸಲಾತಿ ರಹಿತ ಹಳೆ ಮೀಸಲಾತಿಯ ಜಾರಿಗಾಗಿ ಸಮಾವೇಶ

ರಾಯಚೂರು, ಮಾ.20-

ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ರಾಜ್ಯ ಸಮಿತಿ ವತಿಯಿಂದ ಒಳಮೀಸಲಾತಿ ರಹಿತ ಹಳೆಯ ಮೀಸಲಾತಿ ಜಾರಿಗಾಗಿ ಆಗ್ರಹಿಸಿ ಮಾ. 25ರಂದು ಬೃಹತ್ ಪ್ರತಿಭಟನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಸಂಚಾಲಕರಾದ ರವೀಂದ್ರನಾಥ್ ಪಟ್ಟಿ ತಿಳಿಸಿದರು.



ಅವರು ಶುಕ್ರವಾರ ನಗರದಲ್ಲಿನ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ಮಾರ್ಚ್ 25ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರು ನಗರದ ಫ್ರೀಡಂ ಪಾರ್ಕ್‌ನಲ್ಲಿ ವಿವಿಧ ಬೇಡಿಕೆ ಗಳನ್ನು ಈಡೇರಿಸುವಂತೆ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದ್ದು ನ್ಯಾಯಮೂರ್ತಿ ನಾಗಮಹಂದಾಸ್ ರವರು ಸಮೀಕ್ಷೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸದೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಅಗತ್ಯ ಅಂಕಿ ಅಂಶಗಳನ್ನು ಕ್ರೂಢೀಕರಿಸದೆ ಒಂದು ಜಾತಿಯನ್ನು ಓಲೈಸಲು ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಜನಸಂಖ್ಯೆಯನ್ನು 04ಭಾಗಗಳಾಗಿ ವಿಂಗಡಣೆ ಮಾಡಿ ಸರ್ಕಾರದ ನಿಬಂಧನೆಗಳಿಗೆ ವಿರುದ್ಧವಾಗಿ ಮಾಡಿದ್ದು ಹಾಗೂ

ಭಾರತದ ಸರ್ವೋಚ ನ್ಯಾಯಾಲಯವು 01.08.2024ರಂದು ನೀಡಿದ ತೀರ್ಪಿನನ್ವಯ ಒಳಮೀಸಲಾತಿ ನೀಡುವ ಅಧಿಕಾರ ರಾಜ್ಯಗಳಿಗೆ ಇದ್ದರೂ, ಅದು ಸಮಗ್ರ ಹಾಗೂ ಖಚಿತ ಅಂಕಿಅಂಶಗಳ ಆಧಾರದ ಮೇಲೆ ಮಾತ್ರ ನೀಡಬೇಕೆಂದು ಸ್ಪಷ್ಟಪಡಿಸಿದೆ. ಆದರೆ ಕರ್ನಾಟಕ ಸರ್ಕಾರವು ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದ ಏಕ ಸದಸ್ಯ ಆಯೋಗದ ವರದಿ ಆಧಾರವಾಗಿ ಕೈಗೊಂಡ ಕ್ರಮಗಳು ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಅನ್ಯಾಯಕಾರಿಯಾಗಿದೆ ಎಂದು ಆರೋಪಿಸಿದರು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅವೈಜ್ಞಾನಿಕ, ಅಪೂರ್ಣ ಹಾಗೂ ಪಕ್ಷಪಾತದಿಂದ ಕೂಡಿದ್ದು, ಅದನ್ನು ಸರ್ಕಾರ ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು. ಜೊತೆಗೆ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಂಕಿಅಂಶಗಳೊಂದಿಗೆ ಹೋಲಿಕೆ ನಡೆಸಿ ವ್ಯತ್ಯಾಸ ಕಂಡುಬಂದಲ್ಲಿ ಸಮಗ್ರ ಮರು ಸಮೀಕ್ಷೆ ಕೈಗೊಳ್ಳಬೇಕೆಂದು ಹೇಳಿದರು.ಇದಲ್ಲದೆ, 03.09.2025ರಂದು ಹೊರಡಿಸಿರುವ ಮೀಸಲಾತಿ ಆದೇಶವನ್ನು ಹಿಂಪಡೆಯುವುದು, ಜಾತಿ ಪ್ರಮಾಣ ಪತ್ರಗಳಲ್ಲಿ ಎ,ಬಿ ಸಿ ,ವರ್ಗೀಕರಣವನ್ನು ರದ್ದುಪಡಿಸಿ ಮೂಲ ಜಾತಿಗಳನ್ನು ದಾಖಲಿಸುವುದು, ಈಗಾಗಲೇ ನೀಡಿರುವ ಪ್ರಮಾಣ ಪತ್ರಗಳಿಗೆ ಮಾನ್ಯತೆ ನೀಡುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಸರ್ಕಾರ ಮುಂದಿಟ್ಟರು.ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಸೇರಿರುವ 63 ಜಾತಿಗಳಿಗೆ ಉದ್ಯೋಗ, ಶಿಕ್ಷಣ ಸೇರಿದಂತೆ ವಿವಿಧ ಸೌಲಭ್ಯಗಳಲ್ಲಿ ಅವಕಾಶ ಕಲ್ಪಿಸಲು ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ ಹೊಲಯ ಸಮುದಾಯದ ಜನಸಂಖ್ಯೆ ಬಗ್ಗೆ ತಪ್ಪು ಅಂಕಿಅಂಶ ನೀಡಿರುವ ಕುರಿತು ಮರು ಪರಿಶೀಲನೆ

ಮೂರನೇಯ ಪುಟಕ್ಕೆ

## ದಿ.22 ರಂದು ಚಿಂತನ ಮಂಥನ ಕಾರ್ಯಕ್ರಮ



ರಾಯಚೂರು,ಮಾ.20-

ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಸಮಾನ ಮನಸ್ಕರ ವೇದಿಕೆ ವತಿಯಿಂದ ದಿ.22ರಂದು ಬೆಳಿಗ್ಗೆ 11:30ಕ್ಕೆ ಆಶಾಪುರ ರಸ್ತೆಯ ವಾಲ್ಮೀಕಿ ಭವನದಲ್ಲಿ ಚಿಂತನ ಮಂಥನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಖಿಲಾಂಡ ಶ್ರೀ ಮಹರ್ಷಿ ವಾಲ್ಮೀಕಿ ನಾಯಕ ಸಮಿತಿಯ ಕಲ್ಯಾಣ ಕರ್ನಾಟಕ ವಿಭಾಗದ ಅಧ್ಯಕ್ಷರಾದ ವೆಂಕಟೇಶ ನಾಯಕ ಅಸ್ಕಿಹಾಳ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಸಮಾಜಕ್ಕೆ ಶೇ.56 ಮೀಸಲಾತಿ ನೀಡಬೇಕು.ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ನಿಗದಿ, ಹೊಸ ಹುದ್ದೆಗಳಿಗೆ ನೇಮಕಾತಿ, ಸರ್ವಪಕ್ಷ ಸಭೆ ಕರೆದು ಚರ್ಚೆ ನಡೆಸುವುದು ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳನ್ನು ಚರ್ಚೆ ನಡೆಸಲಾಗುವುದು ಎಂದರು.

ಶಿಕ್ಷಣ ಕ್ಷೇತ್ರದಲ್ಲಿ ಅನುದಾನ ವಿಳಂಬ, ಶಿಕ್ಷಕರ ಕೊರತೆ, ಮೂಲಭೂತ ಸೌಲಭ್ಯಗಳ ಅಭಾವ ಸೇರಿದಂತೆ ಸಮಸ್ಯೆಗಳ ಕುರಿತು ಚರ್ಚೆ ನಡೆಯಲಿದೆ. ಸಮಾಜದ ರಾಜಕೀಯ ನಿರ್ಲಕ್ಷ್ಯ, ನಾಯಕರು ಎದುರಿಸುತ್ತಿರುವ ಅನ್ಯಾಯ ಕುರಿತು ಪ್ರಸ್ತಾಪಿಸಲಾಗುತ್ತದೆ ಎಂದರು.

ಕಾರ್ಯಕ್ರಮ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಅವರ ನೇತೃತ್ವದಲ್ಲಿ ನಡೆಯಲಿದ್ದು, ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸಮಾಜದ ಮುಖಂಡರು, ಸಂಘ ಸಂಸ್ಥೆಗಳು, ಮಹಿಳೆಯರು, ಯುವಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.ಈ ಸಂದರ್ಭದಲ್ಲಿ ಈರೇಶ, ನರಶಿಂಹಲು ನಾಯಕ್ ಸೇರಿದಂತೆ ಇತರರು ಇದ್ದರು.

## ನಾಲೆಗೆ ಕಾಲುಜಾರಿ ಬಿದ್ದ ಬಾಲಕ,ಅಗ್ನಿಶಾಮಕ ದಳದಿಂದ ಹುಡುಕಾಟ



ಲಿಂಗಸಗೂರು,ಮಾ.20-

ತಾಲ್ಲೂಕಿನ ರೋಡಲಬಂಡ ಜಾವೂರ ಹತ್ತಿರದ ನಾರಾಯಣಪುರ ಬಲದಂಡೆ ನಾಲೆಯಲಿ ಬಾಲಕ ಕಾಲುಜಾರಿ ಬಿದ್ದ ಘಟನೆ ಜರುಗಿದ್ದು ಅಗ್ನಿ ಶಾಮಕದಳದಿಂದ ಹುಡುಕಾಟ ನಡೆಸಿದ್ದಾರೆ.

ಬುಧವಾರ ಬೆಳಗ್ಗೆ ಬಾಲಕ ದಶರಥ ತಂದೆ ರಮೇಶ ಜವಳಗೇರಾ ವಯಸ್ಸು 9 ವರ್ಷದ ಬಾಲಕ ಜಾವೂರ ಹತ್ತಿರದ ಬಹಿರ್ದೇಶಗೆ ಹೋಗಿ ನಾಲೆಯಲಿ ಕೈಕಾಲು ತೊಳೆಯಲು ನಾಲೆಗೆ ಇಳಿದಾಗ ಕಾಲುಜಾರಿ ಬಿದ್ದಿದ್ದಾನೆಂದು ಹೇಳಲಾಗುತಿದ್ದು ನಾಲೆಯಲಿ ಮುಳುಗಿದ ಬಾಲಕನ ಶವದ ಹುಡುಕಾಟವನ್ನು ಅಗ್ನಿಶಾಮಕ ದಳದಿಂದ ನಡೆದಿದೆ . ಮೂಲತ ಬಾಲಕನ ಊರು ಸಿಂಧನೂರು ತಾಲೂಕಿನ ಜವಳಗೇರಾ ಎಂದು ಹೇಳಲಾಗು ತಿದ್ದು ಕೆಲವೆ ದಿನದ ಹಿಂದೆ ಬಾಲಕನ ತಂದೆ ಮೃತಪಟ್ಟಿದ್ದು ತಾಯಿಯ ತವರು ಮನೆಯಾದ ಜಾವೂರಗೆ ಬಂದಿದ್ದ ರೆಂದು ಹೇಳಲಾಗುತಿದ್ದು ಇಂದು ಬೆಳಗ್ಗೆ ಬಾಲಕ ಕಾಲುಜಾರಿ ನಾಲೆಗೆ ಬಿದ್ದ ಸುದ್ದಿ ಕುಟುಂಬಕ್ಕೆ ಬರಸಿಡಿಲು ಬಡಿದಂತಾಗಿದೆ.

ಘಟನೆ ನಡೆದ ಸ್ಥಳದಲಿ ಸಾಕಷ್ಟು ಜನಸೇರಿದ್ದು ಕಂಡುಬಂತು .

## ಮಠದಲ್ಲಿ.ನೇಣು ಬಿಗಿದ ಸ್ಥಿತಿಯಲ್ಲಿ ಸ್ವಾಮೀಜಿಯ ಮೃತ ದೇಹ ಪತ್ತೆ

ಸಿಂಧನೂರು,ಮಾ.20-

ಸರ್ಕಾರಿ ಸೇವೆಯಲ್ಲಿ ಇದ್ದುಕೊಂಡೇ ಮಠದ ಸ್ಥಾಪಿಸಿ. ಸ್ವಾಮೀಜಿಯಾಗಿದ್ದ ಮುಖ್ಯ ಗುರು ಒಬ್ಬರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿರುವ ಘಟನೆ ತಾಲೂಕಿನ ಬಸ್ಸಾಪುರ (ಇ ಜೆ ) ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ.




ಮುಳ್ಳೂರು ಇ. ಜೆ.ಗ್ರಾಮದ.ಸರಕಾರಿ ಶಾಲೆಯ ಮುಖ್ಯ ಗುರು ಪ್ರಾಥಮಿಕ ದೇವೇಂದ್ರಪ್ಪ.( 58) ಮೃತರು. ಸರಕಾರಿ ಸೇವೆಯಲ್ಲಿದ್ದ ಅವರು. ಕಳೆದ ಅನೇಕ ವೈರಾಗ್ಯ ಜೀವನದತ್ತ ಶಿಕ್ಷಕನಾಗಿ ದೇವೇಂದ್ರಪ್ಪ ವರ್ಷಗಳಿಂದ ಮುಖ ಮಾಡಿದ್ದರು ಎನ್ನಲಾಗಿದೆ. ಮೂಲತಃ ಗದಗ್ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಗುಳಗುಳಿ ಗ್ರಾಮದ ಅವರು ಕಳೆದ ಎರಡು ದಶಕಗಳಿಂದ ಸಿಂಧನೂರು ತಾಲೂಕಿನಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ಸರ್ಕಾರಿ ನೌಕರಿ ಜೊತೆಗೆ ಬಸಪುರ ಗ್ರಾಮದಲ್ಲಿ ಮಠ ಶಿವಾನಂದ ಜಗದ್ಗುರು ನಾಮದಡಿ ಮಠವನ್ನು ಸ್ಥಾಪಿಸಿ ತಮ್ಮದೇ ಆದ ಭಕ್ತ ಸಮೂಹ ಸಂಪಾದಿಸಿದ್ದರು. ಶಾಲಾ ಅವಧಿ ನಂತರ ಮಠದಲ್ಲಿ ಪುರಾಣ. ಪ್ರವಚನ ನಡೆಸುತ್ತಿದ್ದ ತಮ್ಮ ಮಠದಲ್ಲೇ ಅವರ ಮೃತದೇಹ ಪತ್ತೆಯಾಗಿದೆ.

ಮೂರನೇಯ ಪುಟಕ್ಕೆ

## ಕೂಡಲೇ ಸಮೀಕ್ಷೆ ಕಾರ್ಯ ಕೈಗೊಂಡು ಹಾನಿಯಾದ ಬೆಳೆ ಪರಿಹಾರ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಿ.: ಶಾಸಕ ಹಂಪನಗೌಡ ಬಾದರ್ಲಿ

ಸಿಂಧನೂರು,ಮಾ.20-

ದಿನಾಂಕ: 19-3-2026. ರಂದು ಸಿಂಧನೂರು. ಶಾಸಕರಾದ. ಶ್ರೀ ಹಂಪನಗೌಡ ಬಾದರ್ಲಿ ಅವರು. ಕೊಪ್ಪಳ ಜಿಲ್ಲೆಯ. ತಾಲೂಕ್, ಹಿಟ್ನಾಳ ಹೋಬಳಿಯ. ಬಸಾಪುರ ಗ್ರಾಮದ ತುಂಗಭದ್ರಾ ಎಡೆದಂಡೆ ಮುಖ್ಯ ಕಾಲುವೆ. ವೀಕ್ಷಣೆ ಮಾಡಿದರು. ತುಂಗಭದ್ರಾ ಜಲಾಶಯದಿಂದ. ದಿಢೀರನೆ ನೀರಿನ ಹರಿವನ್ನು. 200. ಕ್ಯೂಸೆಕ್ಸ್ ದಿಂದ 2,000. ಕ್ಯೂ ಸೆಕ್ಸ್ ಗೆ ಹೆಚ್ಚಿಸಿದರೆ ಪರಿಣಾಮವಾಗಿ. ಮುನಿರಾಬಾದ್ ಸಮೀಪದ. ಬಸಾಪುರ. ಹಾಗೂ. ಬಂಡಿ ಹರ್ಲಾಪು.ರ್ ಗ್ರಾಮಗಳ ನಡುವಿನ. 13ನೇ ಮೈಲಿಯ ವ್ಯಾಪ್ತಿಯಲ್ಲಿ. ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ. ಒಡೆದು ಅಪಾರ ಪ್ರಮಾಣದ ನೀರು. ನದಿ ಪಾತ್ರಕ್ಕೆ ಹರಿದು ಹೋಗುತ್ತಿ ರುವ. ಸುದ್ದಿ ತಿಳಿದು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ರಾತ್ರಿ ಹರಿದ ಅಪಾರ ಪ್ರಮಾಣದ ನೀರಿನಿಂದ. ರೈತರ ಗದ್ದೆಗಳಿಗೆ ಹಾನಿಯಾಗಿದ್ದು. ಹೆಚ್ಚಿನ ಪ್ರಮಾಣದಲ್ಲಿ ಭತ್ತ ಬೆಳೆದ ರೈತರಿಗೆ ಹಾನಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಕಾಲುವೆ ನೀರು ಹೆಚ್ಚಿನ



ಪ್ರಮಾಣದಿಂದ ಹರಿದಿರುವುದರಿಂದ. ಗಿಡಮರಗಳು ಕಿತ್ತು ಹೋಗಿ ರಸ್ತೆಗಳು ಸಂಪೂರ್ಣ ಹಾನಿಯಾಗಿರುತ್ತವೆ. ಈ ಸಂಬಂಧ. ಶಾಸಕರು. ಸಂಬಂಧ ಪಟ್ಟ. ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ. ತಾಲೂಕ ಆಡಳಿತ ಅಧಿಕಾರಿಗಳೊಂದಿಗೆ ಭೇಟಿ ನೀಡಿ. ತುಂಗಭದ್ರಾ ಎಡೆದಂಡೆ ಮುಖ್ಯ ಕಾಲುವೆ ಆದಷ್ಟು ಬೇಗ ಸರಿಪಡಿಸಿ. ಕಾಲುವೆಗೆ ನೀರು ಹರಿಸಬೇಕು. ನಂತರ ಕೃಷಿ ಕಂದಾಯ ನೀರಾವರಿ ಇಲಾಖೆ ಜಂಟಿ ಸಮೀಕ್ಷೆ ಕಾರ್ಯ ಕೈಗೊಂಡು ಹಾನಿಯಾದ ಕೃಷಿ ಜಮೀನುಗಳ ಗದ್ದೆಗಳನ್ನು ಪರಿಶೀಲನೆ ಮಾಡಿ. ಭತ್ತ ಬೆಳೆದ ರೈತರಿಗೆ ಸೂಕ್ತ ಪರಿಹಾರವನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು. ಅಧಿಕಾರಿಗಳಿಗೆ ಸೂಚಿಸಿದರು.

# ರಾಜ್ಯಪಾಲರಿಂದ ನಶಾ ಮುಕ್ತ ಭಾರತ, ಯುವ ಶುದ್ಧಿ ಅಭಿಯಾನ ವಾಕಥಾನ್‌ಗೆ ಚಾಲನೆ



ಬಳ್ಳಾರಿ, ಮಾ.20-

ಮಾದಕ ವ್ಯಸನವು ಕೇವಲ ವ್ಯಕ್ತಿಯ ಸಮಸ್ಯೆಯಲ್ಲ. ಕುಟುಂಬಗಳನ್ನು ವಿಘಟಿಸಿ ಸಮಾಜದಲ್ಲಿ ಅಶಾಂತಿ ಮತ್ತು ಅಪರಾಧಗಳನ್ನು ಹೆಚ್ಚಿಸುವ ರಾಷ್ಟ್ರೀಯ ಸವಾಲಾಗಿದೆ. ಸದೃಢ ಭಾರತ ನಿರ್ಮಾಣಕ್ಕಾಗಿ ಯುವಶಕ್ತಿಯು ವ್ಯಸನ ಮುಕ್ತ ಇಂದಿನ ಅತ್ಯಗತ್ಯ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ಬಳ್ಳಾರಿ ನಗರದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಕ್ರೀಡಾಂಗಣ ಮೈದಾನದಲ್ಲಿ ಬುಧವಾರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ದಿಶಾಬೋಧಿ ಫೌಂಡೇಷನ್ ಮತ್ತು ನಾರ್ಕೋ ಟಿಕ್ಸ್ ಬ್ಯೂರೋ ಸಹಯೋಗದಲ್ಲಿ ಆಯೋಜಿಸಿದ್ದ ನಶಾ ಮುಕ್ತ ಭಾರತ, ಯುವ ಶುದ್ಧಿ ಅಭಿಯಾನ ವಾಕಥಾ ನ್‌ಗೆ ಚಾಲನೆ ನೀಡಿ ಮಾತನಾಡಿದರು.

ಕರ್ನಾಟಕದ ಪುಣ್ಯ ಭೂಮಿಯು ಶ್ರೀಮಂತ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿದೆ. ಬಸವಣ್ಣನವರಂತಹ ಮಹಾನ್ ಸಂತರ ಬೋಧನೆಗಳು ನಮಗೆ ಸದಾ ಸಂಯಮ ಮತ್ತು ಸದಾಚಾರದ ಹಾದಿಯನ್ನು ತೋರಿಸಿವೆ. ಇಂತಹ ಪವಿತ್ರ ಮಣ್ಣಿನಲ್ಲಿ ಮಾದಕದ್ರವ್ಯಗಳ ಹಾವಳಿ ಹೆಚ್ಚುತ್ತಿರುವುದು ಆತಂಕಕಾರಿ ವಿಷಯವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಭಾರತವು ವಿಶ್ವದ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿದೆ. ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ.

ಯುವಜನತೆ ಯಲ್ಲಿ ರುವ ಶಕ್ತಿಯು ದೇಶವನ್ನು ವಿಕಸಿತ ಭಾರತದ ಕೊಂಡೊಯ್ಯಲು ಸಹಕಾರಿ ಯಾಗಬೇಕು. ಅದು ಸಾಕಾರವಾಗ ಬೇಕಾದರೆ ಯುವಪೀಳಿಗೆ ಮಾದಕ ದ್ರವ್ಯಗಳಿಂದ ಮುಕ್ತವಾಗಬೇಕು ಎಂದು ಹೇಳಿದ ರಾಜ್ಯಪಾಲರು, ತಮ್ಮ ವೈಯಕ್ತಿಕ ಜೀವನದ ಶಿಸ್ತನ್ನು ನೆನಪಸಿಕೊಂಡರು. 'ನಾನು ಬಾಲ್ಯದಿಂದಲೂ ಯಾವುದೇ ರೀತಿಯ ವ್ಯಸನಕ್ಕೆ ಒಳಗಾಗಿಲ್ಲ. ಕನಿಷ್ಠ ಅಡಿಕೆಯನ್ನೂ ತಿನ್ನುವ ಅಭ್ಯಾಸ ನನಗಿಲ್ಲ. ಈ ನೈತಿಕ ಶಿಸ್ತು ನನ್ನನ್ನು ಸಕ್ರಿಯವಾಗಿರಲು ಪ್ರೇರೇಪಿಸುತ್ತದೆ' ಎಂದು ಹೇಳಿ ಯುವ ಸಮೂಹಕ್ಕೆ ಸ್ಫೂರ್ತಿ ತುಂಬಿದರು. ಯುವ ಶುದ್ಧಿ ಅಭಿಯಾನವು ದೇಶಾದ್ಯಂತ ಬದಲಾ ವಣೆಯ ಅಲೆಯನ್ನು ಸೃಷ್ಟಿಸಲಿ ಎಂದು ಶುಭ ಹಾರೈಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ.ಬಿ.ಸಿ.ಭಗವಾನ್ ಮಾತನಾಡಿ, ಯುವಜನತೆ ಮಾದಕ ವ್ಯಸನದಂತಹ ಕೆಟ್ಟ ಹವ್ಯಾಸಗಳಿಗೆ ಬಲಿಯಾಗದೆ, ಆರೋಗ್ಯವಂತ ಮತ್ತು ಸದೃಢ ಭಾರತದ ನಿರ್ಮಾಣಕ್ಕೆ ಕೈಜೋಡಿಸಬೇಕು. ನಮ್ಮ ದೇಶದ ಅತಿ ದೊಡ್ಡ ಶಕ್ತಿ ಯುವಸಂಪತ್ತು. ಆದರೆ ಇಂದು ಮಾದಕ ದ್ರವ್ಯಗಳ ಜಾಲವು ಈ ಶಕ್ತಿಯನ್ನು ಕುಂದಿಸು ತ್ತಿದೆ. ಸಣ್ಣ ವಯಸ್ಸಿ ನಲ್ಲೇ ಹೃದ ಯಾಘಾತ ಮತ್ತು ಮೆದುಳು ಸಂಬಂಧಿ ಕಾಯಿಲೆಗಳಿಗೆ ಮಾದಕ ವ್ಯಸನವೇ ಪ್ರಮುಖ ಕಾರಣವಾ ಗುತ್ತಿದೆ. ಇದನ್ನು ತಡೆಗಟ್ಟಲು ವಿಶ್ವವಿದ್ಯಾಲಯವು ರಾಜ್ಯಾದ್ಯಂತ ಅಭಿಯಾನ ಹಮ್ಮಿಕೊಂಡಿದೆ ಎಂದು ತಿಳಿಸಿದರು.

ಮಾದಕ ದ್ರವ್ಯ ಮುಕ್ತ ಕ್ಯಾಂಪಸ್ ನಿರ್ಮಾಣಕ್ಕಾಗಿ ಪ್ರತಿಯೊಂದು ಕಾಲೇಜಿನಲ್ಲಿ 'ಮಾದಕ ದ್ರವ್ಯ ವಿರೋ ಪಡೆ'ಯನ್ನು ರಚಿಸಲಾಗಿದೆ. ವಿದ್ಯಾರ್ಥಿಗಳು ಕೇವಲ ವ್ಯಸನದಿಂದ ದೂರವಿರುವುದಷ್ಟೇ ಅಲ್ಲದೆ, ತಮ್ಮ ಸುತ್ತಮುತ್ತಲಿನವರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ಆಶಿಸಿದರು.

ಕ್ಯಾಥೋಲಿಕ್ ಬಿಷಪ್ ಹೆನ್ರಿ ಡಿಸೋಜ ಮಾತನಾಡಿ, ನಾವು ಎಲ್ಲಿ ಮತ್ತು ಯಾರಿಗೆ ಹುಟ್ಟುತ್ತೇವೆ ಎಂಬುದು ಮುಖ್ಯವಲ್ಲ. ಜೀವನದಲ್ಲಿ ಯಾವ ಗುರಿಯನ್ನು ತಲುಪುತ್ತೇವೆ ಎಂಬುದು ಮುಖ್ಯ. ಯುವಜನರು ಮಾದಕ ವ್ಯಸನದಿಂದ ಮುಕ್ತರಾಗಿ, ಉನ್ನತ ಸಾಧನೆಯ ಹಾದಿ ಹಿಡಿದಾಗ ಮಾತ್ರ ದೇಶಕ್ಕೆ ಭವಿಷ್ಯವಿದೆ ಎಂದು ತಿಳಿಸಿದರು. ನಾಡಿನ ಹಿರಿಯ ಕವಿ ಡಾ.ಜಿ.ಎಸ್. ಶಿವರುದ್ರಪ್ಪನವರ ಸಾಲುಗಳನ್ನು ಉಲ್ಲೇಖಿಸಿದ ಅವರು, ನಮ್ಮ ದೇಶದಲ್ಲಿ ನಾನಾ ಧರ್ಮ, ಜಾತಿ ಹಾಗೂ ಪಂಥದ ಜನರಿದ್ದಾರೆ. ಆದರೆ ನಾವು ಇಂದು ಹುಡುಕಬೇಕಿರುವುದು ಮನುಷ್ಯತ್ವವನ್ನು. ಮನುಷ್ಯರು ಪ್ರೀತಿ, ಗೌರವ ಹಾಗೂ ಸಹಬಾಳ್ವೆಯಿಂದ ಬದುಕಿದಾಗ ಮಾತ್ರ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯ ಎಂದರು.

ಕಮ್ಮರಚೇಡು ಶ್ರೀಕಲ್ಯಾಣ ಸ್ವಾಮಿ ಸಂಸ್ಥಾನ ಮಠದ ಕಲ್ಯಾಣ ಸ್ವಾಮೀಜಿ ಮಾತನಾಡಿ, ವಿಜ್ಞಾನ ಬೆಳೆದಂತೆ ಮನುಷ್ಯನಲ್ಲಿ ಅಜ್ಞಾನ ಮತ್ತು ಅಹಂಕಾರವೂ ಹೆಚ್ಚುತ್ತಿದೆ. ಆರೋಗ್ಯ ಭಾಗ್ಯದ ಮುಂದೆ ಅಧಿಕಾರ ಅಥವಾ ಆಯುಷ್ಯದ ಭಾಗ್ಯವಿದ್ದರೂ ಪ್ರಯೋಜನವಿಲ್ಲ ಎಂದು ಅಭಿಮತ ವ್ಯಕ್ತಪಡಿಸಿದರು. ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಗಾದೆ ಮಾತಿದೆ. ಆದರೆ ಇಂದು ನಮಗೆ ವಿಷಮುಕ್ತವಾದ ಹಣ್ಣು, ತರಕಾರಿ ಅಥವಾ ಶುದ್ಧವಾದ ಗಾಳಿ ಸಿಗುತ್ತಿಲ್ಲದಿರುವುದು ದುರದೃಷ್ಟಕರ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಕೇವಲ ಶಿಕ್ಷಣಕ್ಕೆ ಸೀಮಿತವಾಗದೆ, ಸಾಮಾಜಿಕ ಮತ್ತು ನೈತಿಕ ಜಾಗೃತಿ ಮೂಡಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಶ್ಲಾಘಿಸಿದರು.

# ನೊಂದ ಗ್ರಾಹಕರಿಗೆ ನ್ಯಾಯ ದೊರಕಿಸಿಕೊಡುವುದು ಸಮಾಜ ಸೇವಕರ ಕರ್ತವ್ಯ: ನ್ಯಾಯಾಧೀಶ ಶ್ರೀನಿವಾಸ್ ನವಲೆ




ಕಲಬುರಗಿ: ಮಾ.20-

ಕಾನೂನು ಸೇವಾ ಪ್ರಾಧಿಕಾರದಿಂದ ಸಾಮಾನ್ಯ ಜನರಿಗೆ ಹಾಗೂ ಬಡವರಿಗೆ ದೊರೆಯುವ ಉಚಿತ ಕಾನೂನು ಸವಲತ್ತುಗಳ ಬಗ್ಗೆ ಮಾಹಿತಿ ನೀಡಿ, ನೊಂದ ಗ್ರಾಹಕರಿಗೆ ನ್ಯಾಯ ದೊರಕಿಸಿಕೊಡಲು ಸಮಾಜ ಸೇವಕರು ಮುಂದಾಗಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀನಿವಾಸ್ ನವಲೆ ಅವರು ಹೇಳಿದರು.

ಬುಧವಾರದಂದು ಕಲಬುರಗಿಯ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯವಾದಿಗಳ ಸಂಘ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಮಹಾತ್ಮ ಗಾಂಧೀಜಿ ಗ್ರಾಹಕರ ಹಿತರಕ್ಷಣಾ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ 'ವಿಶ್ವ ಗ್ರಾಹಕರ ದಿನಾಚಾರಣೆ' ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಸಿದರು.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಖ್ಯಾತ ನ್ಯಾಯವಾದಿ ಹಾಗೂ ಗ್ರಾಹಕ ಪರ ಹೋರಾಟಗಾರರಾದ ವೈಜನಾಥ ಎಸ್. ಝಳಕಿ ಅವರು ಮಾತನಾಡಿ ನೊಂದ ಗ್ರಾಹಕರು ಯಾವುದೇ ಕಾರಣಕ್ಕೂ ನ್ಯಾಯ ಪಡೆಯಲು ಹಿಂಜರಿಯಬಾರದು. 2019ರ ಹೊಸ ಗ್ರಾಹಕರ ಹಿತರಕ್ಷಣೆ ಕಾಯ್ದೆಯು ಗ್ರಾಹಕರಿಗೆ ಅಮೂಲ್ಯವಾದ ಶಕ್ತಿಯನ್ನು ನೀಡಿದೆ. ವಿಮೆ, ಬ್ಯಾಂಕು, ವಾಹನ ಮಾರಾಟ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗ್ರಾಹಕರಿಗೆ ಆಗುವ ಅನ್ಯಾಯದ ವಿರುದ್ಧ ಹೋರಾಡಲು ಕಾನೂನಿನಲ್ಲಿ ದೊಡ್ಡ ಅವಕಾಶವಿದೆ ಎಂದರು.

ಗ್ರಾಹಕರು ತಾವು ಮಾಡುವ ವ್ಯವಹಾರಗಳ ಬಗ್ಗೆ ಸೂಕ್ತ ದಾಖಲೆಗಳನ್ನು ಹೊಂದಿರಬೇಕು ಎಂದು ಕಿವಿಮಾತು ಹೇಳಿದ ಅವರು ಜಾಗೃತ ಗ್ರಾಹಕರು ರಾಷ್ಟ್ರದ ಆರ್ಥಿಕ ಶಕ್ತಿಯ ಭದ್ರ ಬುನಾದಿ. ಯಾವುದೇ ವಸ್ತು ಅಥವಾ ಸೇವೆಯನ್ನು ಪಡೆಯುವಾಗ ಗುಣಮಟ್ಟದ ಬಗ್ಗೆ ಅರಿವಿರಲಿ ಮತ್ತು ಕಡ್ಡಾಯವಾಗಿ ರಶೀದಿ ಪಡೆಯುವುದನ್ನು ಮರೆಯಬೇಡಿ. ದಾಖಲೆಗಳಿದ್ದಲ್ಲಿ ಮಾತ್ರ ಜಿಲ್ಲಾ, ರಾಜ್ಯ ಅಥವಾ ರಾಷ್ಟ್ರೀಯ ಆಯೋಗಗಳಲ್ಲಿ ನ್ಯಾಯ ಪಡೆಯಲು ಸಾಧ್ಯ, ಎಂದು ಐತಿಹಾಸಿಕ ತೀರ್ಪುಗಳನ್ನು ಉಲ್ಲೇಖಿಸಿ ವಿವರಿಸಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಎಸ್.ವಿ. ಪಸಾರ್, ರೋಟರಿ ಕ್ಲಬ್ ಖಜಾಂಚಿ ಹಾಗೂ ನ್ಯಾಯವಾದಿ ಗುಂಡುರಾವ ಪದಾಮ್ಮಜಿ, ಪ್ರಾಧಿಕಾರದ ಸಿಬ್ಬಂದಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಎಸ್.ಎಸ್.ಎಲ್.ಸಿ ಕನ್ನಡ ವಿಷಯ ಪರೀಕ್ಷೆ 293 ವಿದ್ಯಾರ್ಥಿಗಳು ಗೈರು

# ವಿವಿಧ ಪರೀಕ್ಷಾ ಕೇಂದ್ರಗಳಿಗೆ ಸಿಇಓ ಕುರೇರ ಭೇಟಿ ಪರಿಶೀಲನೆ




ಬಾಗಲಕೋಟೆ ,ಮಾ.20-

ಜಿಲ್ಲೆಯಲ್ಲಿ ಬುಧವಾರ ನಡೆದ ಎಸ್.ಎಸ್.ಎಲ್.ಸಿ ಕನ್ನಡ ವಿಷಯ ಪರೀಕ್ಷೆ ಹಿನ್ನಲೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷಾ ಪ್ರಕ್ರಿಯೆಯನ್ನು ಪರಿಶೀಲಿಸಿದರು.

ವಿದ್ಯಾಗಿರಿಯಲ್ಲಿರುವ ಬಸವೇಶ್ವರ ವಿದ್ಯಾವರ್ಧಕ ಸಂಘದ ಇಂಗ್ಲೀಷ ಮಾಧ್ಯಮ ಶಾಲೆ, ಸಮೃದ್ದಿ ಗುರುಕುಲ ಶಾಲೆ, ಗದ್ದನಕೇರಿಯಲ್ಲಿ ರುವ ಮಳಿಯಪ್ಪ ಅಜ್ಜನ ಶಾಲೆ ಹಾಗೂ ಕಲಾದಗಿಯ ಹಣ್ಣು ಬೆಳೆಗಾರರ ವಿದ್ಯಾವರ್ಧಕ ಸಂಘದ ಶಾಲೆಗಳಲ್ಲಿ ಸ್ಥಾಪಿಸಲಾದ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷಾ ಕೊಠಡಿಗಳಲ್ಲಿ ನಡೆಯುತ್ತಿರುವ ವ್ಯವಸ್ಥೆಗಳನ್ನು ನೇರವಾಗಿ ಅವಲೋ ಕಿಸಿ, ವಿದ್ಯಾರ್ಥಿಗಳು ಶಾಂತ ವಾತಾವರಣದಲ್ಲಿ ಪರೀಕ್ಷೆ ಬರೆಯುತ್ತಿರುವುದನ್ನು ಪರಿಶೀಲಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿನ ಭದ್ರತಾ ವ್ಯವಸ್ಥೆ, ವಿದ್ಯಾರ್ಥಿಗಳ ಆಸನ ವ್ಯವಸ್ಥೆ, ಕುಡಿಯುವ ನೀರು ಮತ್ತು ಬೆಳಕಿನ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿದರು. ಪರೀಕ್ಷಾ ಅಕ್ರಮಗಳಿಗೆ ಆಸ್ಪದ ನೀಡದಂತೆ ಸರ್ಕಾರ ಹೊರಡಿಸಿರುವ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಮತ್ತು ಕೊಠಡಿ ಮೇಲ್ವಿಚಾರಕರೊಂದಿಗೆ ಚರ್ಚಿಸಿದ ಕುರೇರ್ ಅವರು, ಯಾವುದೇ ರೀತಿಯ ಅಕ್ರಮಗಳಿಗೆ ಅವಕಾಶ ನೀಡದಂತೆ ಮತ್ತು ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡುವಂತೆ ನಿರ್ದೇಶನ ನೀಡಿದರು.

ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಶಾಂತಿಯುತವಾಗಿ ಪರೀಕ್ಷೆ ಬರೆಯಲು ಪೂರಕವಾದ ವಾತಾವರಣ ಇದೆಯೇ ಎಂಬುದನ್ನು ಖಚಿತಪಡಿಸಿಕೊಂಡರು. ಕೇಂದ್ರಗಳಲ್ಲಿ ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಾಗಳ ಕಾರ್ಯಕ್ಷಮತೆ ಮತ್ತು ಪ್ರಶ್ನೆಪತ್ರಿಕೆಗಳ ಸುರಕ್ಷಿತ ನಿರ್ವಹಣೆಯನ್ನು ಅವರು ಪರಿಶೀಲಿಸಿದರು. ವಿದ್ಯಾರ್ಥಿಗಳಿಗೆ ಭಯರಹಿತ ಹಾಗೂ ಸುಗಮ ಪರೀಕ್ಷಾ ವಾತಾವರಣ ಕಲ್ಪಿಸುವುದು ಮುಖ್ಯವಾಗಿದ್ದು, ಎಲ್ಲ ಸಿಬ್ಬಂದಿ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಲು ತಿಳಿಸಿದರು. ಭೇಟಿ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾಮಿ ಇದ್ದರು.

ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎ.ಸಿ.ಮನ್ನಿಕೇರಿ ಅವರು ಬುಧವಾರ ನಡೆದ ಕನ್ನಡ ವಿಷಯ ಪರೀಕ್ಷೆಗೆ ಒಟ್ಟು 31625 ವಿದ್ಯಾರ್ಥಿಗಳು ನೋಂದಣಿ ಮಾಡಿದ್ದು, ಈ ಪೈಕಿ 31332 ವಿದ್ಯಾರ್ಥಿಗಳು ಹಾಜರಾಗಿ 293 ವಿದ್ಯಾರ್ಥಿಗಳು ಗೈರು ಹಾಜ ರಾಗಿರುತ್ತಾರೆ. ಯಾವುದೇ ವಿದ್ಯಾರ್ಥಿ ಡಿಬಾರ್ ಆಗಿರುವದಿಲ್ಲ ವೆಂದು ತಿಳಿಸಿದರು.

# ಮುಖ್ಯಮಂತ್ರಿಗಳಿಂದ ಕಲಬುರಗಿಯ ಪ್ರವಾಸಿ ತಾಣಗಳ ಮಾಹಿತಿವುಳ್ಳ ಕಾಫಿ-ಟೇಬಲ್ ಪುಸ್ತಕ ಬಿಡುಗಡೆ



ಕಲಬುರಗಿ,ಮಾ.20-

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಬೆಂಗಳೂರಿನ ವಿಧಾನಸೌಧದಲ್ಲಿ ಪ್ರವಾಸೋದ್ಯಮ ಇಲಾಖೆಯು ಹೊರತಂದಿರುವ ಕಲಬುರಗಿ ಜಿಲ್ಲೆಯ ಪ್ರವಾಸಿ ತಾಣಗಳ ಸಂಕ್ಷಿಪ್ತ ಮಾಹಿತಿ ನೀಡುವ ಕಾಫಿ-ಟೇಬಲ್ ಪುಸ್ತಕ ಮತ್ತು ಪ್ರವಾಸಿ ಮಡಿಕೆ ಪತ್ರಗಳನ್ನು (ಬ್ರೋಚರ್) ಬಿಡುಗಡೆ ಮಾಡಿದರು.

ಜಿಲ್ಲೆಯ ಪ್ರವಾಸಿ ತಾಣಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಪಡಿಸುವ ನಿಟ್ಟಿನಲ್ಲಿ ಕಲಬುರಗಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯು ವಿಶೇಷ ಆಸಕ್ತಿ ವಹಿಸಿ ಇದೇ ಮೊದಲ ಬಾರಿಗೆ ಜಿಲ್ಲೆಯ ಕಲೆ, ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸವನ್ನು ಬಿಂಬಿಸುವ ಮತ್ತು ಜಿಲ್ಲೆಯ ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ಹಾಗೂ ಇತರೆ ಪ್ರವಾಸಿ ತಾಣಗಳ ಕುರಿತ ಮಾಹಿತಿ ನೀಡುವ ಕಾಫಿ ಟೇಬಲ್ ಪುಸ್ತಕ ಹೊರತಂದಿದೆ. ಪುಸ್ತಕ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿದ್ದು, ಸುಮಾರು 11.05 ಲಕ್ಷರೂ.ಗಳ ಖರ್ಚು ಮಾಡಿ ಆಕರ್ಷಕವಾಗಿ ಪುಸ್ತಕ ಹೊರತರಲಾಗಿದೆ.

ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಜರಗುವ ಪ್ರವಾಸೋದ್ಯಮ ಮೇಳಗಳು, ಟ್ರಾವೆಲ್ ಎಕ್ಸ ಪೋಗಳು ಮತ್ತು ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಿವಿಧ ರಾಜ್ಯ ಮತ್ತು ದೇಶಗಳ ಪ್ರವಾಸೋದ್ಯಮ ಕ್ಷೇತ್ರದ ಪಾಲುದಾರರು, ಹೂಡಿಕೆದಾರರು ಮತ್ತು ಪ್ರವಾಸೋದ್ಯಮ ಉತ್ಸಾಹಿಗಳ ಮೂಲಕ ಕಲಬುರಗಿ ಜಿಲ್ಲೆಯ ಪ್ರವಾಸೋದ್ಯಮದ ಕುರಿತು ಹೆಚ್ಚಿನ ಪ್ರಚಾರ ನೀಡುವಲ್ಲಿ ಕಾಫಿಟೇಬಲ್ ಪುಸ್ತಕ ಸಹಕಾರಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ.

ಇದಲ್ಲದೆ ಜಿಲ್ಲೆಗೆ ಭೇಟಿ ನೀಡುವ ದೇಶಿಯ ಹಾಗೂ ವಿದೇಶಿಯ ಪ್ರವಾಸಿಗರಿಗೆ ಜಿಲ್ಲೆಯ ಪ್ರವಾಸಿ ತಾಣಗಳ ಕುರಿತು ಸಂಕ್ಷಿಪ್ತ ಮಾಹಿತಿ ಒದಗಿಸುವ ಪ್ರವಾಸಿ ಮಡಿಕೆ ಪತ್ರಗಳನ್ನು (ಬ್ರೋಚರ್) ಸಹ ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ. ಶರಣಪ್ರಕಾಶ ಪಾಟೀಲ, ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು ಹಾಗೂ ಆಳಂದ ಶಾಸಕ ಬಿ.ಆರ್. ಪಾಟೀಲ್, ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷರು ಹಾಗೂ ಜೇವರ್ಗಿ ಶಾಸಕ ಡಾ. ಅಜಯ ಸಿಂಗ್, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ಅಫಜಲಪೂರ ಶಾಸಕ ಎಂ.ವೈ ಪಾಟೀಲ, ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ. ಕೆ.ವಿ.ತ್ರಿಲೋಕ ಚಂದ್ರ, ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಪ್ರವಾಸೋದ್ಯಮ ಇಲಾಖೆಯ ಕಲಬುರಗಿ ವಿಭಾಗದ ಜಂಟಿ ನಿರ್ದೇಶಕ ಡಾ. ಎಸ್. ತಿಪ್ಪೇಸ್ವಾಮಿ, ಉಪನಿರ್ದೇಶಕಿ ಬೇಬಿ ಮೋಗೇರ ಹಾಗೂ ಇಲಾಖೆಯ ಇತರೆ ಅಧಿಕಾರಿ-ಸಿಬ್ಬಂದಿಗಳು ಉಪಸ್ಥಿತರಿದ್ದರು.



# ಕರಪತ್ರ, ಪೋಸ್ಟರ, ಕಿರುಹೊತ್ತಿಗೆ ಮುದ್ರಿಸಲು ಅನುಮತಿ ಕಡ್ಡಾಯ

ಬಾಗಲಕೋಟೆ ,ಮಾ.20-

ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆ ಹಿನ್ನಲೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಹಾಗೂ ಅಭ್ಯರ್ಥಿಗಳ ಪ್ರಚಾರದ ಕರಪತ್ರ, ಪೋಸ್ಟರ್ ಹಾಗೂ ಕಿರುಹೊತ್ತಿಗೆ ಸೇರಿದಂತೆ ಇತ್ಯಾದಿಗಳನ್ನು ಮುದ್ರಿಸುವ ಪೂರ್ವದಲ್ಲಿ ಮುದ್ರಕರು ನಿಗಧಿತ ನಮೂನೆ ಭರ್ತಿ ಮಾಡಿ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿ ಕಾರಿಗಳು ಆಗಿರುವ ಜಿಲ್ಲಾ ಚುನಾ ವಣಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿಂದು ಜರುಗಿದ ಮುದ್ರಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮುದ್ರಕರ ಮತ್ತು ಪ್ರಕಾಶಕರ ಹೆಸರನ್ನು ಹೊಂದಿರದ ಯಾವುದೇ ಚುನಾವಣೆಯ ಕಿರುಹೊತ್ತಿಗೆ ಅಥವಾ ಬಿತ್ತಿಪತ್ರಗಳನ್ನು ಮುದ್ರಿಸಿ ಪ್ರಕಟಿಸುವಂತಿಲ್ಲ. ಮುದ್ರಣ ಮಾಡಿಸುವವರಿಂದ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿಸಿಕೊಳ್ಳತಕ್ಕದ್ದು. ಪ್ರಕಟಿಸಿದ ಕರಪತ್ರ ಮತ್ತು ನಮೂನೆಯನ್ನು 24 ಗಂಟೆಗಳಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸಲ್ಲಿಸಲು ತಿಳಿಸಿದರು.

ಚುನಾವಣೆಯಲ್ಲಿ ಅಭ್ಯರ್ಥಿಗಳ, ಪಕ್ಷದ ಖರ್ಚು ವೆಚ್ಚಗಳ ಮಾಹಿತಿ ಮಹತ್ವದ್ದಾಗಿದ್ದು, ಚುನಾವಣಾ ಆಯೋಗವು ಗರಿಷ್ಠ 40 ಲಕ್ಷ ರೂ. ಖರ್ಚು ಮಾಡಲು ನಿಗದಿಪಡಿಸಿದೆ. ಮುದ್ರಕರು ಮುದ್ರಿತ ಪ್ರಕಟಣೆ ಯಲ್ಲಿ ಮುದ್ರಣ ಸ್ಥಳ, ಎಷ್ಟು ಪ್ರತಿ ಎಂಬುದನ್ನು ಪ್ರಕಟಿಸತಕ್ಕದ್ದು. ಅದರ ವೆಚ್ಚವನ್ನು ಚೆಕ್, ಡಿಡಿ ಅಥವಾ ಫೋನ್‌ಪೇ ಮೂಲಕ ಪಾವತಿ ಮಾಡಿಕೊಂಡು ಕಾನೂನಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು. ನಿಬಂಧನೆ ಗಳನ್ನು ಉಲ್ಲಂಘಿಸಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಮಾತನಾಡಿ ಮುದ್ರಣದ ವಿವರದಲ್ಲಿ ಶಾಂತಿಭಂಗ, ಭದ್ರತೆ, ಧಾರ್ಮಿಕ ನಿಂದನೆ, ವ್ಯಕ್ತಿಗತ ಅವಹೇಳನಕಾರಿ ಹೇಳಿಕೆಗಳು ಇರಬಾರದು. ಪ್ರಿಂಟ್ ಮಾಡುವ ಪೂರ್ವದಲ್ಲಿ ಅದರಲ್ಲಿರುವ ಎಲ್ಲ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ, ನಂತರ ಮುದ್ರಣ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ ಮುಖ್ಯ ಲೆಕ್ಕಾಧಿಕಾರಿ ಮಾತನಾಡಿ ನಿಗದಿತ ಅಪೆಂಡಿಕ್ಸ್ ಎ ಮತ್ತು ಬಿ ನಮೂನೆಗಳಲ್ಲಿ ಭರ್ತಿ ಎಂ.ಸಿ.ಎಂ.ಸಿ ಸಮಿತಿಗೆ ನೀಡಿದಲ್ಲಿ ಪ್ರಚಾರದ ಕರಪತ್ರ, ಪೋಸ್ಟರ್ ಹಾಗೂ ಕಿರುಹೊತ್ತಿಗೆ ಮುದ್ರಣಕ್ಕೆ ಅನುಮತಿ ನೀಡಲಾಗುತ್ತದೆ ಎಂದರು.

ಸಭೆಯಲ್ಲಿ ಹುನಗುಂದ ತಹಶೀಲ್ದಾರ ಡಾ.ಪ್ರದೀಪಕುಮಾರ, ಬೀಳಗಿ ತಹಶೀಲ್ದಾರ ಹತ್ನಟ್ಟಿ ಸೇರಿದಂತೆ ಜಿಲ್ಲೆಯ ಮುದ್ರಣಾಲಯಗಳ ಮಾಲಿಕರು ಹಾಗೂ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಗೋಡಂಬಿಯ ಮೌಲ್ಯವರ್ಧನೆಯಿಂದ ವಿವಿಧ ಪಾನೀಯಗಳನ್ನು ತಯಾರಿಸಿ ಹೆಚ್ಚಿನ ಆದಾಯ ಪಡೆಯಲು ರೈತರಿಗೆ ಸಲಹೆ



ಬೀದರ, ಮಾ.20-

ಗೋಡಂಬಿ ಹಣ್ಣಿನ ಮೌಲ್ಯ ವರ್ಧನೆಯಿಂದ ವಿವಿಧ ಪಾನೀಯಗಳನ್ನು ತಯಾರಿಸಿ ಹೆಚ್ಚಿನ ಆದಾಯ ಪಡೆಯಬೇಕು.ಗೋಡಂಬಿಯು ಬರಡು ಮತ್ತು ಕೆಂಪು ಭೂಮಿಯ ಅದ್ಭುತ ಮತ್ತು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಬಂಗಾರದ ಬೆಳೆಯಾದ ಇದನ್ನು 7.50 7.50 ಮೀಟರಿನ ಅಂತರದಲ್ಲಿ ಸವಕಳಿಯಾದ ಕೆಂಪು ಮಣ್ಣಿನಲ್ಲಿ ಯಶಸ್ವಿಯಾಗಿ ಬೆಳೆದರೆ 3 ವರ್ಷದ ನಂತರ ರೈತರು ಇತರೇ ಬೆಳೆಗಳಿಗಿಂತ ಅಧಿಕ ಲಾಭ ಪಡೆಯಬಹುದೆಂದು ಬೀದರ ತೋಟಗಾರಿಕೆ ಕಾಲೇಜಿನ ಡೀನ್ ಡಾ.ಎಸ್.ವಿ.ಪಾಟೀಲ್ ರೈತರಿಗೆ ಸಲಹೆ ನೀಡಿದರು.

ಅವರು ಬುಧವಾರ ಬೀದರಿನಲ್ಲಿ ತೋಟಗಾರಿಕೆ ಮಹಾವಿದ್ಯಾಲಯ ಹಾಗೂ ಗೋಡಂಬಿ ಮತ್ತು ಕೋಕೋ ಅಭಿವೃದ್ಧಿ ನಿರ್ದೇಶನಾಲಯ, ಕೊಚ್ಚಿ, ಕೇರಳದ ಅನುದಾನದಡಿ ರೈತರಿಗಾಗಿ ಆಯೋಜಿಸಿದ ಜಿಲ್ಲಾ ಮಟ್ಟದ ಗೋಡಂಬಿ ಬೆಳೆ ಕುರಿತು ಒಂದು ದಿನದ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದ ಹಾಗೂ ಕೋಳಾರ (ಕೆ) ಕೃಷಿ ಕ್ಷೇತ್ರದಲ್ಲಿ ಬೆಳೆದಿರುವ ವಿವಿಧ ತಳಿಗಳ ಕಚ್ಚಾ ಗೋಡಂಬಿಗಳ ಪ್ರದರ್ಶನದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗೋಡಂಬಿ ಬೆಳೆಯನ್ನು ಕಡಿಮೆ ನೈಸರ್ಗಿಕ ಸಂಪನ್ಮೂಲ ಬಳಸಿ ಅಧಿಕ ಲಾಭ ಹಾಗೂ ಆರ್ಥಿಕ ಮತ್ತು ಪೋಷ್ಟಿಕಾಂಶದ ಭದ್ರತೆ ನೀಡುವ ಬೆಳೆಯಾಗಿದೆ. ಕೋಯ್ಲು ಮಾಡಿದ 5-8 ಕೆ.ಜಿ. ಗೋಡಂಬಿ ಹಣ್ಣಿಗೆ ಒಂದು ಕೆ.ಜಿ. ಕಚ್ಚಾ ಗೋಡಂಬಿ ದೊರೆಯುತ್ತದೆ. ಸುಮಾರು ಒಂದು ಎಕರೆಗೆ 5.6 ರಿಂದ 7 ಮೆಟ್ರಿಕ್ ಟನ್‌ದಷ್ಟು ಗೋಡಂಬಿ ಹಣ್ಣುಗಳು ದೊರೆಯುತ್ತವೆ. ಇದನ್ನು ಬೆಳೆದ ಹತ್ತು ವರ್ಷ ಮೇಲ್ಪಟ್ಟ ಗೋಡಂಬಿ ಬೆಳೆಯಿಂದ ಒಂದು ಎಕರೆ ಪ್ರದೇಶದಲ್ಲಿ ಅಂದಾಜು 1050-1100 ಕೆ.ಜಿ. ಕಚ್ಚಾ ಗೋಡಂಬಿಯ ಇಳುವರಿ ಪಡೆಯಬಹುದು ಎಂದರು

ಕರ್ನಾಟಕ ರಾಜ್ಯದಲ್ಲಿ ಶೇ.70 ರಷ್ಟು ಗೋಡಂಬಿಯನ್ನು ಕರಾವಳಿ ಕರ್ನಾಟಕದಲ್ಲಿ ಬೆಳೆಯಲಾಗುತ್ತಿದೆ. ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಪ್ರದೇಶ ಮತ್ತು ಉತ್ಪಾದನೆಯಲ್ಲಿ ಕ್ರಮವಾಗಿ ಮೊದಲನೇ ಮತ್ತು ಎರಡನೇ ರ್‍ಯಾಂಕ್ ಪಡೆದಿವೆ. ಮಂಗಳೂರನ್ನು ಭಾರತ ದೇಶದ ಗೋಡಂಬಿ ರಾಜಧಾನಿ ಎಂದು ಹೆಸರುವಾಸಿಯಾಗಿದೆ ಎಂದು ಹೇಳಿದರು.

ಗೋಡಂಬಿ ಬೆಳೆಗಾರರಾದ ನಾಗನಾಥರಾವ ನಿಡೋದೆ ಹಾಗೂ ನಾರಾಯಣರಾವ ಬರಿದಾಬಾದೆ ಮಾತನಾಡಿ, ತಮಗೆ ಗೋಡಂಬಿ ಬೆಳೆಯಿಂದ ಸಾಕಷ್ಟು ಲಾಭವಾಗಿದೆ. ರೈತರು ಗೋಡಂಬಿ ಬೆಳೆ ಬೆಳೆಯುವುದರಿಂದ ಇನ್ನೊಂದು ಬೆಳೆಯ ಅತ್ಯುತ್ತಮ ಇಳುವರಿ ಮತ್ತು ಶುದ್ಧವಾದ ಪರಿಸರವನ್ನು ಪಡೆಯಬಹುದು. ಗೋಡಂಬಿ ಬೆಳೆಯನ್ನು ಬೆಳೆಯಲು ಬೀದರ ಜಿಲ್ಲೆಯ ವಾತಾವರಣ ಹೇಳಿಸಿ ಮಾಡಿದಂತಿದೆ. ಒಂದು ಬಾರಿ ನಾಟಿ ಮಾಡಿದರೆ ಸುಮಾರು 30 ವರ್ಷಗಳಿಗಿಂತ ಹೆಚ್ಚು ನಿರಂತರವಾಗಿ ಇದರ ಲಾಭ ಪಡೆಯಬಹುದು. ಬೀದರ ಹೆಚ್ಚು ಹೆಚ್ಚು ರೈತರು ಈ ಬೆಳೆಯನ್ನು ಬೆಳೆಯಲು ಮುಂದೆ ಬರಬೇಕು. ಇದಕ್ಕೆ ಕೆಂಪು ಮಣ್ಣು ಹೊಂದಿರುವ ಜಮೀನು ಸೂಕ್ತವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ ಡಾ. ಮೊಹಮ್ಮದ ಫಾರೂಕ್, ಬಯಲು ಪ್ರದೇಶಕ್ಕೆ ಸೂಕ್ತವಾದ ಗೋಡಂಬಿ ತಳಿಗಳು, ಡಾ. ಶ್ರೀನಿವಾಸ ಎನ್. ಗೋಡಂಬಿ ಬೆಳೆಯ ಸುಧಾರಿತ ಸಸಿ ತಯಾರಿಸುವ ವಿಧಾನಗಳು, ಡಾ.ವಿಜಯ ಮಹಾಂತೇಶ ಗೋಡಂಬಿ ಬೆಳೆಯಲ್ಲಿ ಸಾವಯವ ಬೇಸಾಯ ಕ್ರಮಗಳು ಡಾ. ಎ.ಪಿ.ಸಿಂಗ್ ಗೋಡಂಬಿ ಬೆಳೆಯ ಔಷಧೀಯ ಮಹತ್ವ ಕುರಿತು ವಿಸ್ತೃತವಾಗಿ ತಾಂತ್ರೀಕ ಮಾಹಿತಿ ರೈತರೊಂದಿಗೆ ಹಂಚಿಕೊಂಡರು.

ವೀರಭದ್ರೇಶ್ವರ ಅಗ್ರೋ ಇಂಡಸ್ಟ್ರೀಜ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಮೋಲಕುಮಾರ ವಿಜಾಪೂರೆ ಮಾತನಾಡಿ, ಕಚ್ಚಾ ಗೋಡಂಬಿಯನ್ನು ಬೀದರ ಜಿಲ್ಲೆಯ ಹೆಚ್ಚು ಹೆಚ್ಚು ರೈತರೇ ಬೆಳೆದು ಪ್ರೋಸೆಸಿಂಗೆ ಪೂರೈಸಿದರೆ ತಾವು ಖರೀದಿಸಿ ಒಳ್ಳೆಯ ದರ ಕೊಡುತ್ತೇವೆ ಎಂದು ಭರವಸೆ ನೀಡಿದರು. ಈ ವಿಚಾರ ಸಂಕಿರಣದಲ್ಲಿ ಗೋಡಂಬಿ ಬೆಳೆ ಹಾಗೂ ಮೌಲ್ಯವರ್ಧಿತ ಪದಾರ್ಥಗಳ ವಸ್ತು ಪ್ರದರ್ಶನವನ್ನು ಸಹ ಏರ್ಪಾಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬೀದರ ಜಿಲ್ಲೆಯ 150 ರೈತರು ಪಾಲ್ಗೊಂಡು ವಿಚಾರ ಸಂಕಿರಣದ ಸದುಪಯೋಗ ಪಡೆದುಕೊಂಡರು. ಗೋಡಂಬಿ ಬೆಳೆ ಕುರಿತು ರೈತರು ಕೇಳಲಾದ ಪ್ರಶ್ನೆಗಳಿಗೆ ತಜ್ಞರು ಮಾಹಿತಿ ಸಹ ನೀಡಿದರು. ಡಾ. ಎ.ಪಿ. ಸಿಂಗ್ ಸ್ವಾಗತಿಸಿದರು, ಡಾ. ವಿಜಯ ಮಹಾಂತೇಶ ರವರು ನಿರೂಪಿಸಿದರು.

## ಒಂದನೇಯ ಪುಟದಿಂದ

## ದಿ.25ರಂದು ಒಳ ಮೀಸಲಾತಿ ರಹಿತ ಹಳೆ ಮೀಸಲಾತಿಯ ಜಾರಿಗಾಗಿ ಸಮಾವೇಶ

ನಡೆಸಿ, ಸಂಬಂಧಿತ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒಳಮಿಸಲಾತಿ ರಹಿತ ಅಳೆಮಿಸಲಾತಿಯ ಜಾರಿಗಾಗಿ ಒತ್ತಾಯಿಸಿ ಬೃಹತ್ ಪ್ರತಿಭಟನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ರವೀಂದ್ರನಾಥ್ ಪಟ್ಟಿ ತಿಳಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಜಗನ್ನಾಥ್ ಸುಂಕಾರಿ, ವಸಂತ,ದೇವರಾಜು, ವಿಶ್ವನಾಥ್ ಪಟ್ಟಿ, ವಿಜಯ ಭಾಸ್ಕರ ಅರ್ಚನಾ ಸುಂಕಾರಿ, ತಿಮ್ಮರೆಡ್ಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಶ್ರೀ ಯಲ್ಲಮ್ಮ ದೇವಸ್ಥಾನ ನಿರ್ಮಾಣ ಅಡಿಗಲ್ಲು ಕಾಮಗಾರಿಗೆ ಪಾಪಾರೆಡ್ಡಿ ಚಾಲನೆ

ನೂತನ ದೇವಸ್ಥಾನ ನಿರ್ಮಾಣ ಮಾಡಲಾಗುತ್ತಿದೆ.ಪುರಾತನ ಕಾಲದ ಐತಿಹಾಸಿಕ ದೇವಾಲಯಗಳು ನಶಿಸಿಹೋಗಬಾರದು. ದೇವಾಲಯ ರಕ್ಷಣೆ ಮಾಡಬೇಕು ಎಂದು ನೂತನ ದೇವಸ್ಥಾನ ನಿರ್ಮಾಣ ಕಾಮಗಾರಿ ಪ್ರಾರಂಭಿಸಲಾಗಿದೆ ಇದರಿಂದ ಭಕ್ತರಿಗೆ ಅನುಕೂಲವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಮುನ್ನೂರು ಕಾಪು ಸಮಾಜದ ಅಧ್ಯಕ್ಷರಾದ ಬೆಲ್ಲ ನರಸರೆಡ್ಡಿ, ಮಾಜಿ ಶಾಸಕರು ಎ ಪಾಪಾ ರೆಡ್ಡಿ, ಕಾರ್ಯಧ್ಯಕ್ಷರಾದ ವಿ ಕೃಷ್ಣಮೂರ್ತಿ,ರಾಳ ತಿಮ್ಮ ರೆಡ್ಡಿ, ವಿಧಾನಪರಿಷತ್ ಸದಸ್ಯರಾದ ಎ ವಸಂತ್ ಕುಮಾರ ಕೇ ಶಾಂತಪ್ಪ, ಕಡಗೋಳ್ ಆಂಜನೇಯ, ಎಂ ವಿರೂಪಾಕ್ಷ, ಸಿದ್ದನಗೌಡ ಪಾಟೀಲ್ ಶಾನಬಾಳ, ಜಿಂದಪ್ಪ, ಜಿ ಶಿವಮೂರ್ತಿ,ಚನ್ನಪ್ಪ, ಜಯಂತ್ ರಾವ್ ಪತಂಗಿ, ರಾಜಕುಮಾರ್ ,ಟಿ ಮಲ್ಲೇಶ್, ತಾಯನಗೌಡ, ಕೆ ಟಿ ಆಂಜನೇಯ,ಎನ್ ಕೆ ನಾಗರಾಜ್, ಪರಶುರಾಮ್,ಪಲಾಗುಲು ನಾಗರಾಜ್,ಕೆಜಿ ಜಗದೀಶ್, ಮುನ್ನೂರು ಸಮಾಜದ ಮುಖಂಡರುಗಳಾದ ಬಂಗಿ ನರಸರೆಡ್ಡಿ, ಕೆ ರಾಜೇಂದ್ರ ರೆಡ್ಡಿ,ಟಿ ಶ್ರೀನಿವಾಸ್ ರೆಡ್ಡಿ, ಎನ್ ಶ್ರೀನಿವಾಸ್ ರೆಡ್ಡಿ, ಬಿ ತಿಮ್ಮರೆಡ್ಡಿ, ಪಿ ಶ್ರೀನಿವಾಸ್ ರೆಡ್ಡಿ, ಯು ಲಿಂಗ ರೆಡ್ಡಿ,ಜಿ ಪ್ರತಾಪ್ ರೆಡ್ಡಿ, ಜಿ ನರಸಾರೆಡ್ಡಿ,ಗೊಂದಲಿ ನರಸರೆಡ್ಡಿ,ಮಲ್ಲರೆಡ್ಡಿ, ಪ್ರಸಾದ್ ರೆಡ್ಡಿ, ಬಿ ಭೀಮ್ ರೆಡ್ಡಿ,ಯು ಗೋವಿಂದ ರೆಡ್ಡಿ, ನಿಂಬೆಕಾಯಿ ಭೀಮರೆಡ್ಡಿ,ಎಸ್ ಜನಾರ್ಧನ್ ರೆಡ್ಡಿ, ಪುಡ್ಲಾ ರಾಜೇಂದ್ರ ರೆಡ್ಡಿ, ಈರಣ್ಣ, ಎ ಸುಧರ್ಶನ್ ರೆಡ್ಡಿ( ರಾಜು),ಜಪಾ ರೆಡ್ಡಿ,ಡ್ಯಾಡಿ ವೀರೇಶ್ ರೆಡ್ಡಿ, ಭೀಮ ರೆಡ್ಡಿ, ಜಿ ವೀರೇಶ್ ರೆಡ್ಡಿ,ಬಿ ವಿಶಾಲ್ ರೆಡ್ಡಿ, ಬಿ ಶಶಿಕಾಂತ್ ರೆಡ್ಡಿ,ಡ್ಯಾಡಿ ವಿಜಯ್ ರೆಡ್ಡಿ, ಜಿ ವಿಜಯ ರಾಜ್ ರೆಡ್ಡಿ, ಜಿ ನಾಗರಾಜ್, ಎಸ್ ಸಂಜವ್ ರೆಡ್ಡಿ,ಗುಡಿ ಪೂಜಾರಿ ಗಳಾದ ಲಕ್ಷೀ ದೇವಿ, ಜಿಂದಪ್ಪ, ರಾಮು ಸ್ವಾಮಿ,ಮಲ್ಲಿಕಾರ್ಜುನ ರೆಡ್ಡಿ,ಕೇಶವ್ ರೆಡ್ಡಿ, ಶಂಕರ ರೆಡ್ಡಿ, ರಾಮ್ ರೆಡ್ಡಿ, ವಿಜಯ್ ಕುಮ್ಕಾರ್, ಚಂದ್ರಶೇಖರ,ಹಾಗೂ ಪಾಪಾ ರೆಡ್ಡಿ ಯವರ ಕುಟುಂಬ ವರ್ಗ ದವರು ಪಾಲ್ಗೊಂಡಿದ್ದರು.

## ದಿ. 25: ಹಳೆ ಮೀಸಲಾತಿ ಜಾರಿಗೆ ಆಗ್ರಹಿಸಿ ಬೆಂಗಳೂರಿನಲ್ಲಿ ಪ್ರತಿಭಟನಾ ಸಮಾವೇಶ

ಬಲಗೈ ಸಮುದಾಯಕ್ಕೆ ಸೇರಿರುವ 63 ಜಾತಿಗಳನ್ನು ಬಲಗೈ ಗುಂಪಿನಲ್ಲಿ ಉದ್ಯೋಗ, ಶಿಕ್ಷಣ ಮತ್ತು ಇತರೆ ಸೌಲಭ್ಯ ಪಡೆಯಲು ಅಧಿಸೂಚನೆ ಹೊರಡಿಸಬೇಕು ಸೇರಿ ಚಿತ್ರದುರ್ಗ ಜಿಲ್ಲೆಯಲ್ಲಿ ಹೊಲಯ ಸಮುದಾಯ ಕೇವಲ 223 ಎಂದು ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿಯಲ್ಲಿ ದಾಖಲಿಸಿರುವುದನ್ನು ಮರು ಪರಿಶೀಲಿಸಿ ಉದ್ದೇಶ ಪೂರ್ವಕವಾಗಿ ಬಲಗೈ ಸಮುದಾಯದ ಜನಸಂಖ್ಯೆಯನ್ನು ಕಡಿಮೆ ಮಾಡಿರುವ ಆಯೋಗದ ಅಧ್ಯಕ್ಷರು ಹಾಗೂ ಅಧಿಕಾರಿಗಳ ಮೇಲೆ ದೌರ್ಜನ್ಯ ತಡೆ ಕಾಯ್ದೆಯನ್ವಯ ಮೊಕದ್ದಮೆ ದಾಖಲಿಸಲು ವಿಶೇಷ ತನಿಖಾ ತಂಡ ನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರಾಮಕೃಷ್ಣ, ನಾಗರಾಜ,ಎಂ ಮಾರೆಪ್ಪ ಸೇರಿದಂತೆ ಉಪಸ್ಥಿತರಿದ್ದರು.

## ಮಠದಲ್ಲಿ,ನೇಣು ಬಿಗಿದ ಸ್ಥಿತಿಯಲ್ಲಿ ಸ್ವಾಮೀಜಿಯ ಮೃತ ದೇಹ ಪತ್ತೆ

ವಿಷಯ ತಿಳಿದು ಸ್ಥಳಕ್ಕೆ. ತುರುವಿಹಾಳ ಪಿ ಎಸ್ ಐ. ಸುಜಾತ ಭೇಟಿ ನೀಡಿ ಪಟನ ಬಗ್ಗೆ ಕುಟುಂಬಸ್ಥರು ಹಾಗೂ ಭಕ್ತರ ಬಳಿ ಮಾಹಿತಿ ಪಡೆದುಕೊಂಡಿದ್ದಾರೆ. ರಮೇಶ್ ಎನ್ನುವವರು ದೂರು ನೀಡಿದ್ದು. ತುರುವೀಹಾಳ ಪೊಲೀಸರು ತನಿಖೆ ಆರಂಭಿಸಿದ್ದಾರೆ..

### ಅಪಹರಣಕ್ಕೊಳಗಾದ ಮತ್ತು ಕಾಣೆಯಾದ ಮಕ್ಕಳ ಪತ್ತೆಗಾಗಿ ರಚನೆಯಾದ ವಿಶೇಷ ಕಾರ್ಯಪಡೆಯ ಸಭೆ

## ಮಕ್ಕಳ ಹಕ್ಕುಗಳು ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ: ಡಾ.ರಾಮ್ ಎಲ್.ಅರಸಿದ್ದಿ

ಕೊಪ್ಪಳ ಮಾ.20-

ಅಪಹರಣಕ್ಕೊಳಗಾದ ಹಾಗೂ ಕಾಣೆಯಾದ ಮಕ್ಕಳ ಪ್ರಕರಣಗಳ ವಿಶ್ಲೇಷಣೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹೆಣ್ಣುಮಕ್ಕಳೇ ಬಾಧಿತರಾಗಿರುವುದು ಕಂಡು ಬಂದಿದ್ದು, ಮಕ್ಕಳಿಗೆ ಸೂಕ್ತ ತಿಳುವಳಿಕೆ ಹಾಗೂ ಶಾಲಾ ಕಾಲೇಜುಗಳಲ್ಲಿ ಮಕ್ಕಳ ಹಕ್ಕುಗಳು ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಇನ್ನೂ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ ಅವರು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ ರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಪಹರಣಕ್ಕೊಳಗಾದ ಮತ್ತು ಕಾಣೆಯಾದ ಮಕ್ಕಳ ಪತ್ತೆಗಾಗಿ ರಚನೆಯಾದ ವಿಶೇಷ ಕಾರ್ಯಪಡೆಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ರಿಟ್ ಪಿಟಿಷನ್ 75/2012ರ ತೀರ್ಪಿನಲ್ಲಿ ಮಕ್ಕಳ ಕಾಣೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಅಪಹರಣ ಪ್ರಕರಣ ಎಂದು ಪ್ರಕರಣ ದಾಖಲಿಸಿಕೊಂಡು, ತನಿಖೆಯನ್ನು ನಡೆಸುವಂತೆ ಆದೇಶಿಸಿದೆ. ಜಿಲ್ಲೆಯಲ್ಲಿ ದಾಖಲಾದ ಆಪಹರಣ ಪ್ರಕರಣಗಳನ್ನು ವಿಶ್ಲೇಷಿಸಲಾಗಿ ಬಹುತೇಕ ಪ್ರಕರಣಗಳಲ್ಲಿ ಹೆಣ್ಣು ಮಕ್ಕಳೇ ಭಾದಿತರಾಗಿದ್ದಾರೆ. ದಾಖಲಾಗಿರುವ ಬಹುತೇಕ ಪ್ರಕರಣಗಳಲ್ಲಿ ಅಪಹರಣಕ್ಕೊಳಗಾದವರು 16-18 ವರ್ಷದೊಳಗಿನ ಹೆಣ್ಣು ಮಕ್ಕಳಾಗಿ ರುವುದರಿಂದ ಈ ಪ್ರಕರಣಗಳನ್ನು ಅಧ್ಯಯನದಲ್ಲಿ ಪ್ರೀತಿ-ಪ್ರೇಮದ ಹೆಸರಿನಲ್ಲಿ ಪಾಲಕರನ್ನು, ಮನೆಯನ್ನು ತೊರೆದು ಹೋದ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ-2012ರಡಿಯಲ್ಲಿ ಅಪ್ರಾಪ್ತ ವಯಸ್ಸಿ ನ ಮಕ್ಕಳೊಂದಿಗಿನ ಸಮ್ಮತ ಲೈಂಗಿಕ ಚಟುವಟಿಕೆಗಳು ಸಹ ಅಪರಾಧಗಳೆಂದು ಪರಿಗಣಿಸಲಾಗುತ್ತದೆ. ಹಾಗೂ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತಿದೆ. ಇದರಿಂದ ಕುಟುಂಬಗಳು ಆರ್ಥಿಕವಾಗಿ ಸಂಕಷ್ಟಕ್ಕೊಳಗಾ ಗಬಹುದಾದ ಸಾಧ್ಯತೆ ಅಧಿಕವಾಗಿವೆ. ಮಕ್ಕಳು ತಿಳಿದೋ-ತಿಳಿಯದೆಯೋ ಈ ಕಾಯ್ದೆಯಡಿಯಲ್ಲಿ ಭಾದಿತರಾಗುತ್ತಿದ್ದಾರೆ. ಸರಕಾರವು ಶಾಲೆ, ಕಾಲೇಜು ಮತ್ತು ವಸತಿ ನಿಲಯಗಳಲ್ಲಿ ಹಾಗೂ ಸಮುದಾಯಗಳಲ್ಲಿ ಮಕ್ಕಳ ಹಕ್ಕುಗಳು ಮತ್ತು ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಕುರಿತು ಮತ್ತಷ್ಟು ಜಾಗೃತಿಯನ್ನು ಮೂಡಿಸಲು ಅನುಸರಿಸಬೇಕಾದ ಕ್ರಮಗಳ ಕುರಿತು ಸೂಚಿಸಿದೆ. ಆದ್ದರಿಂದ ನಿಮ್ಮ ವ್ಯಾಪ್ತಿಯ ಸಂಸ್ಥೆಗಳಲ್ಲಿ ಮತ್ತು ಸಮುದಾಯಗಳಲ್ಲಿ ಈ ಕುರಿತು ಇನ್ನೂ ಹೆಚ್ಚಿನ ಜಾಗೃತಿಯನ್ನು ಮೂಡಿಸಿ ಎಂದು ಭಾಗೀದಾರರ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದರು. ಪಾಲಕರು ಸಹ ಮಕ್ಕಳ ಪೋಷಣೆ ಮತ್ತು ರಕ್ಷಣೆಯು ಪ್ರಮುಖ ಜವಾಬ್ದಾರಿಯಾಗಿದ್ದು, ಮಕ್ಕಳಿಗೆ ಸೂಕ್ತ ತಿಳುವಳಿಕೆಯನ್ನು ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ದರಗದ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಹೇಮಂತಕುಮಾರ, ಪೊಲೀಸ್ ಉಪಾಧೀಕ್ಷಕ ಮುತ್ತಣ್ಣ ಸವರಗೋಳ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸಿಂಧು ಅಂಗಡಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಪ್ರಕಾಶ ಕಡಗದ, ಬಾಲ ನ್ಯಾಯ ಮಂಡಳಿಯ ಸದಸ್ಯರಾದ ನೇತ್ರಾ ಪಾಟೀಲ್, ಪ್ರತಿಭಾ ಕಾಶೀಮಠ ಹಾಗೂ ವಿಸ್ತಾರ ಮತ್ತು ಕಲ್ವಾರಿ ಚಾಪೆಲ್ ಸಂಸ್ಥೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ, ವಿವಿಧ ಪೊಲೀಸ್ ಠಾಣೆಗಳ ಆರಕ್ಷಕ ಉಪ-ನಿರೀಕ್ಷಕರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ, ಕಾಣೆಯಾದ ಮಕ್ಕಳ ಪಾಲಕರು, ಸಂಬಂಧಿಕರು ಭಾಗವಹಿಸಿದ್ದರು.


## ಅರ್ಥಪೂರ್ಣವಾಗಿ ಸರ್ವಜ್ಞನ ಜಯಂತಿ ಆಚರಣೆಗೆ ನಿರ್ಧಾರ

ಯಾದಗಿರಿ,ಮಾ.18-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳ ಸಹಯೋ ಗದೊಂದಿಗೆ ಇದೇ ಫೆಬ್ರವರಿ 20 ರಂದು ಸಂತಕವಿ ಸರ್ವಜ್ಞನ ಜಯಂತಿಯನ್ನು ಅರ್ಥಪೂರ್ಣ ವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಂತಕವಿ ಸರ್ವಜ್ಞ ಜಯಂತಿ ಆಚರಿಸುವ ಕುರಿತು ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಪೂರ್ವಭಾವಿ ಸಿದ್ದತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಅಂದು ನಗರದ ಕನ್ನಡ ಸಾಹಿತ್ಯ ಪರಿಷತ್ ನ ಸಭಾಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ಈ ಜಯಂತಿ ಆಯೋಜಿಸಲು, ಸಂತಕವಿ ಸರ್ವಜ್ಞ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಗೌರವ



ಅರ್ಪಿಸಲು, ನಿರ್ಧರಿಸಲಾಯಿತು.

ಅದರಂತೆ ವೇದಿಕೆ, ಆಸನದ ವ್ಯವಸ್ಥೆ, ಶಿಷ್ಟಾಚಾರದಂತೆ ಗಣ್ಯರನ್ನು, ಉಪನ್ಯಾಸಕರನ್ನು ಆಹ್ವಾನಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ ಅವರು, ಕಾರ್ಯಕ್ರಮದ ಸಂದರ್ಭದಲ್ಲಿ, ಸೂಕ್ತ ಪೋಲಿಸ್ ಬಂದೋಬಸ್ತ್, ವೇದಿಕೆ ಸಿದ್ಧತೆ ನೋಡಿಕೊಳ್ಳಲು, ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ,ಆಮಂತ್ರಣ ಪತ್ರಿಕೆ ವಿತರಿಸುವ ವ್ಯವಸ್ಥೆಗೆ ಸೂಚಿಸಿದರು.

ಜಿಲ್ಲೆಯ ತಾಲೂಕ ಮಟ್ಟದಲ್ಲಿ ಶಾಲಾ, ಕಾಲೇಜು, ಗ್ರಾಮ ಪಂಚಾಯತ್, ವಿವಿಧ ಕಚೇರಿಗಳಲ್ಲಿ ಈ ಜಯಂತಿ ಆಚರಣೆ, ಮುಖ್ಯ ಕಾರ್ಯಕ್ರಮಕ್ಕೆ, ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಸಮಾಜದ ಮೂಲಕ ಹಮ್ಮಿಕೊಳ್ಳಲಾಗುವ ಮೆರವಣಿಗೆ ಕಾರ್ಯಕ್ರಮದ ಬಗ್ಗೆ ಮುಂಚಿತ 'ವಾಗಿ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಲು ಸೂಚಿಸಿದರು.

ಸಭೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀಮತಿ ಉತ್ತರದೇವಿ ಸ್ವಾಗತಿಸಿದರು. ಸಮಾಜದ ಮುಖಂಡರು ಉಪಸ್ಥಿತರಿದ್ದರು.

## ಡಾ.ಬಾಬು ಜಗಜೀವನ ರಾಂ, ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯೋತ್ಸವ: ಮಾ.23 ರಂದು ಪೂರ್ವಭಾವಿ ಸಿದ್ಧತಾ ಸಭೆ

ಬಳ್ಳಾರಿ,ಮಾ.20-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಏ.05 ರಂದು ಭಾರತದ ಮಾಜಿ ಉಪ ಪ್ರಧಾನಮಂತ್ರಿ ಹಾಗೂ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯೋತ್ಸವ ಮತ್ತು ಏ.14 ರಂದು ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಅದ್ದೂರಿ ಆಚರಣೆ ಕುರಿತು ಚರ್ಚಿಸಲು ಮಾ.23 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ಆಯೋಜಿಸಲಾಗಿದೆ.

## ಸಿರವಾರ: ಪದೇ ಪದೇ ವಿದ್ಯುತ್ ವ್ಯತ್ಯಯ-ಜೆಸ್ಕಾಂ ಅಧಿಕಾರಿಗಳಿಗೆ ಮಾನವ ಹಕ್ಕುಗಳ ಪರಿಷತ್ ಮನವಿ



ಸಿರವಾರ,ಮಾ.20-

ಪಟ್ಟಣದಲ್ಲಿ ಕಳೆದ ಒಂದು ವಾರದಿಂದ ಪದೇ ಪದೇ ವಿದ್ಯುತ್ ಕಡಿತವಾಗುತ್ತಿರುವುದನ್ನು ಖಂಡಿಸಿ, ಭಾರತೀಯ ಮಾನವ ಹಕ್ಕುಗಳ ಪರಿಷತ್ ವತಿಯಿಂದ ಇಂದು ಜೆಸ್ಕಾಂ () ಇಲಾಖೆಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.ಸಮಸ್ಯೆಯ ವಿವರ:ಸಿರವಾರ ಪಟ್ಟಣದಲ್ಲಿ ಅಸಮರ್ಪಕ ವಿದ್ಯುತ್ ಪೂರೈಕೆಯಿಂದಾಗಿ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ವರ್ತಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಕೇಳಿಬಂದ ದೂರುಗಳ ಹಿನ್ನೆಲೆಯಲ್ಲಿ ಪರಿಷತ್‌ನ ಪದಾಧಿಕಾರಿಗಳು ಜೆಸ್ಕಾಂ ಕಚೇರಿಗೆ ತೆರಳಿ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆ ಸರಿಪಡಿಸುವಂತೆ ಆಗ್ರಹಿಸಿದರು.

ಅಧಿಕಾರಿಗಳ ತಾಂತ್ರಿಕ ಸ್ಪಷ್ಟನೆ:ಮನವಿ ಸ್ವೀಕರಿಸಿ ಮಾತನಾಡಿದ ಜೆಸ್ಕಾಂ ಅಧಿಕಾರಿಗಳು, ಕಳೆದ ಒಂದು ವಾರದಿಂದ ಉಂಟಾಗುತ್ತಿರುವ ವಿದ್ಯುತ್ ಅಡಚಣೆಗೆ ತಾಂತ್ರಿಕ ಕಾರಣಗಳನ್ನು ಈ ಕೆಳಗಿನಂತೆ ವಿವರಿಸಿದರು:

ಹೆಚ್ಚುವರಿ ಟ್ರಾನ್ಸ್ ಫಾರ್ಮರ್ ಅಳವಡಿಕೆ: ಸಿರವಾರ ಸಬ್ ಸ್ಟೇಷನ್‌ನಲ್ಲಿ ವಿದ್ಯುತ್ ಸಾಮರ್ಥ್ಯ ಹೆಚ್ಚಿಸಲು ಹೊಸದಾಗಿ 10 ಸಾಮರ್ಥ್ಯದ ಹೆಚ್ಚುವರಿ ಟ್ರಾನ್ಸ್ ಫಾರ್ಮರ್ ಅನ್ನು ಅಳವಡಿಸಲಾಗಿದೆ.

ಬ್ರೇಕರ್‌ಗಳ ಅಳವಡಿಕೆ: ಈ ಹೊಸ ಟ್ರಾನ್ಸ್ ಫಾರ್ಮರ್‌ಗೆ ಪೂರಕವಾಗಿ ನಾಲ್ಕು ಬ್ರೇಕರ್‌ಗಳನ್ನು ಕೂಡ ಅಳವಡಿಸಲಾಗಿದೆ.

ಟೆಸ್ಟಿಂಗ್ ಪ್ರಕ್ರಿಯೆ: ಈ ಹೊಸ ಯಂತ್ರೋಪಕರಣಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸುವ () ಕಾರ್ಯ ನಡೆಯುತ್ತಿದೆ. ಈ ಪರೀಕ್ಷಾರ್ಥ ಪ್ರಯೋಗದ ಸಂದರ್ಭದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ವಿದ್ಯುತ್ ಸ್ಥಗಿತಗೊಳಿಸುವುದು ಅನಿವಾರ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಈ ಆಧುನೀಕರಣ ಪ್ರಕ್ರಿಯೆ ಪೂರ್ಣಗೊಂಡ ನಂತರ ಪಟ್ಟಣಕ್ಕೆ ಯಾವುದೇ ತಾಂತ್ರಿಕ ಅಡೆತಡೆಯಿಲ್ಲದೆ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆಯಾಗಲಿದೆ ಎಂದು ಅಧಿಕಾರಿಗಳು ಭರವಸೆ ನೀಡಿದರು.

ಉಪಸ್ಥಿತಿ:ಈ ಸಂದರ್ಭದಲ್ಲಿ ಭಾರತೀಯ ಮಾನವ ಹಕ್ಕುಗಳ ಪರಿಷತ್‌ನ ರಾಜ್ಯ ಕಾರ್ಯದರ್ಶಿಯಾದ ಎಂ ಡಿ ಹುಸೇನ್. ಜಿಲ್ಲಾಧ್ಯಕ್ಷರಾದ ಹಿದಾಯತ್ ದೊಡ್ಡಮನೆ , ಜಿಲ್ಲಾ ಸಂಚಾಲಕರಾದ ಶ್ರೀನಿವಾಸ್ ರೆಡ್ಡಿ.ತಾಲೂಕು ಅಧ್ಯಕ್ಷರಾದ ಕ್ಯಾದಿಗೇರ ನಬಿ ರಸೂಲ್. ತಾಲೂಕು ಸಂಚಾಲಕರಾದ ಇಸ್ಮಾಯಿಲ್. ಜಿಲ್ಲಾ ಕಾರ್ಯದರ್ಶಿಯಾದ ರಹೂಪ್.ಸ್ಥಳೀಯ ಮುಖಂಡರು ಹಾಗೂ ಜೆಸ್ಕಾಂ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು

## ತುಂಗಭದ್ರಾ ಎಡದಂಡೆ ಕಾಲುವೆ ಒಡೆಯುವದಕ್ಕೆ ಅಧಿಕಾರಿಗಳೆ ಕಾರಣಃ ಆನಂದರಾವ್ ಅರೋಪ

ಗಂಗಾವತಿ,ಮಾ.20-

ಸಮೀಪದ ಬಸಾಪುರ ಗ್ರಾಮದ ಮೈಲ್ ನಂ.13 ರಲ್ಲಿ ತುಂಗ ಭದ್ರಾ ಎಡದಂಡೆ ಕಾಲುವೆ ಒಡೆದಿದ್ದು, ಇದಕ್ಕೆ ಜಲ ಸಂಪನ್ಮೂಲ ಇಲಖೆಯ ಅಧಿಕಾರಿಗಳೆ ಕಾರಣ ರಾಗಿದ್ದಾರೆ ಎಂದು ರೈತ ಮುಖಂಡ ಜಂಗಮರ ಕಲ್ಗುಡಿಯ ವೈ ಆನಂ ದರಾವ್ ಅಕ್ರೋಶ ವ್ಯಕ್ತ ಪಡಿಸಿದ್ದಾರೆ.

ಈ ಕುರಿತು ಪತ್ರಕರ್ತರೊಂದಿಗೆ ಮಾತನಾಡಿದ ಅವರು ಪ್ರತಿ ವರ್ಷ ಜಲಾಶಯದಿಂದ ನೀರು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಕಾಲುವೆ ಒಡೆಯುತ್ತದೆ ಇದಕ್ಕೆ ಅಧಿಕಾರಿಗಳು ಮುಂಜಾಗೃತೆ ವಹಿಸದೆ ಇರುವದು ಕಾರಣವಾಗಿದೆ ಎಂದು ಅರೋಪಿಸಿದರು.

ಎಡದಂಡೆ ಕಾಲುವೆಯಿಂದ ನೂರಾರು ಗ್ರಾಮಗಳ ಜನರು ನೀರು ಕುಡಿಯುವದಕ್ಕೆ ಅವಲಂಭನೆಯಾಗಿದ್ದಾರೆ. ಬೇಸಿಗೆಯ ಸಂದರ್ಭದಲ್ಲಿ ನೀರಿಗಾಗಿ ಜನರು ಹಾಹಾಕಾರ ಉದ್ಭವಿಸಿದೆ.

## ಇಲಾಖೆಯಿಂದ ಜಾರಿಯಲ್ಲಿರುವ ಯೋಜನೆಗಳ ಸದುಪಯೋಗ ಪಡೆದುಕೊಳ್ಳಿ-ಅನೀಲಕುಮಾರ

ಬೀದರ, ಮಾ.20-

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗಾಗಿ ಇಲಾಖೆಯ ವತಿಯಿಂದ ಹಲವಾರು ಯೋಜನೆಗಳು ಜಾರಿಯಲ್ಲಿದ್ದು,

ಇದರ ಸದೋಪವನ್ನು ಪಡೆದುಕೊಳ್ಳಬೇಕೆಂದು ಬೀದರ ಸಮಾಜ ಕಲ್ಯಾಣ ಇಲಾಖೆಯ ಗ್ರೇಡ್-1 ಸಹಾಯಕ ನಿರ್ದೇಶಕ ಅನೀಲ ಕುಮಾರ ಮೇಲದೊಡ್ಡಿ ಹೇಳಿದರು.

ಅವರು ಸೋಮವಾರ ಸಮಾಜ ಕಲ್ಯಾಣ ಇಲಾಖೆ ಹಾಗೂ ಮಹಾಮಾನವ ಯೂನಿವರಸಲ್ ವೆಲಫೇರ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬೀದರನ ಅಲಿಯಬರ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದೌರ್ಜನ್ಯದ ಕುರಿತು ಜಾಗೃತಿ/ಅರಿವು ಕಾರ್ಯಕ್ರಮದ ವಿಚಾರ ಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾ ಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲೆ ದೌರ್ಜನ್ಯ



ಎಸಗಿದರೆ ಅವರ ವಿರುದ್ಧ ಕಠಿಣ ಕಾನೂನು ಇರುತ್ತದೆಂದರು. ಇಲಾಖೆ ವತಿಯಿಂದ ವಿವಾಹವಾದ ದಂಪತಿಗಳಿಗೆ, ಸಮುದಾಯದೊಳಗೆ ಅಂತರಜಾತಿ ವಿವಾಹವಾದ ದಂಪತಿಗಳಿಗೆ ಪ್ರೋತ್ಸಾ ಹಧನ, ಮಕ್ಕಳಿಗೆ ಶಿಷ್ಯವೇತನ ಸಹಾಯಧನ, ಕನೂನು ಪದವಿಧರರಿಗೆ ಶಿಷ್ಟವೇತನ ಹಾಗೂ ಯೋಜನೆಗಳು ಜಾರಿಯಲ್ಲಿರುತ್ತವೆಂದರು.

ಕಾರ್ಯಕ್ರಮದಲ್ಲಿ ಭಾರತ ಸಂವಿಧಾನದ ಪ್ರಸ್ತಾವನೆಯನ್ನು ಎಲ್ಲರಿಗೂ ಬೋಧಿಸಲಾಯಿತು. ಹಾಗೂ ಅಲಿಯಂಬರ್ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಮೀನಾಕ್ಷಿ ಪಾಟೀಲ, ಮಹಾಮಾನವ ಯುನಿವರಸಲ್ ವೆಲಫೇರ್ ಚಾರಿ ಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಅಶೋ ಕಕುಮಾರ ಮಾಳಗೆ, ನ್ಯಾಯ ವಾದಿಗಳು ಮತ್ತು ಜಿಲ್ಲಾ ಮದ್ಯಸ್ತ ಗಾರ ತರಬೇತಿದಾರ ಬಿ.ಕೃಷ್ಣಪ್ಪಾ ಅವರುಗಳು ಮಾತ ನಾಡಿ ದರು. ಈ ಸಂದರ್ಭದಲ್ಲಿ ನರಸಿಂಗ್, ಜಗದೀಶ, ರಾಜು ಬಾವಿ ದೊಡ್ಡಿ, ಸಂತೋಷ, ಸಂಗಮೇಶ ಭಾವಿ ದೊಡ್ಡಿ, ಬಸವರಾಜ ಭಾವಿದೊಡ್ಡಿ, ಪುಸ್ಪಾವತಿ, ಮಾಲಾಶ್ರೀ, ಲಕ್ಷ್ಮಿಬಾಯಿ, ಗೌತಮ ಮುಂತ್ತಂಗಿಕರ್ ಸೇರಿದಂತೆ ಇತರರು ಉಪಸ್ಥಿತರಿ ದ್ದರು.

## ರಾಯಚೂರಿನಲ್ಲಿ ಆಲೆಕಲ್ಲು ಮಳೆಗೆ ಲಕ್ಷಾಂತರ ರೂ. ಪಪ್ಪಾಯಿ ಬೆಳೆ ಹಾನಿ

ರಾಯಚೂರು ತಾಲೂಕಿನ ದುಗನೂರು ಗ್ರಾಮದಲ್ಲಿ ಬೆಳೆ ನಷ್ಟವಾಗಿದೆ.ರೈತ ರಾಮಕೃಷ್ಣ , ಸಣ್ಣರಂಗಪ್ಪ ಎಂಬುವವರ 4 ಎಕರೆ ಪಪ್ಪಾಯಿ ತೋಟ ಹಾಳಾಗಿದ್ದು,

ಎಕರೆಗೆ ಒಂದು ಲಕ್ಷ ರೂ. ಖರ್ಚು ಮಾಡಿ ಬೆಳೆದಿದ್ದ ಪಪ್ಪಾಯಿ ಬೆಳೆ ಹಾನಿಯಾಗಿದೆ.

ಒಂದೆರಡು ದಿನದಲ್ಲಿ ಕಟಾವಿಗೆ ಸಿದ್ದತೆಯಲ್ಲಿದ್ದ ರೈತರಿಗೆ 4 ಲಕ್ಷ ರೂ. ನಷ್ಟ ಆಗಿದೆ.

ಮಳೆ ಪರಿಣಾಮ 3600 ಕ್ಕೂ ಹೆಚ್ಚು ಗಿಡಗಳು ಹಾಗೂ ಹಣ್ಣು ಮಣ್ಣುಪಾಲು ಆಗಿವೆ.



ಉಳಿದ ಪಪ್ಪಾಯಿ ಹಣ್ಣು ಸಹ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಆಗದ ಸ್ಥಿತಿಯಲ್ಲಿ ಇವೆ. ಕೂಡಲನೇ ಸರ್ಕಾರವೇ ಪರಿಹಾರ ನೀಡಿ ಕಾಪಾಡಬೇಕು ಅಂತ ರೈತರ ಮನವಿ ಮಾಡಿದ್ದಾರೆ.

## ಕಲಬುರಗಿ ನೆಕ್ಸ್ಟ ಫೌಂಡೇಷನ್ ಮೂಲಕ ಕ್ಯಾಡನ್ಸ್ ಆರ್ಕಿಟೆಕ್ಚರ್ ಸಂಸ್ಥೆ ಜೊತೆ ಒಪ್ಪಂದ

ಕಲಬುರಗಿ,ಮಾ.20-

ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಸಲುವಾಗಿ ರೂಪಿಸಿರುವ ಕಲಬುರಗಿ ನೆಕ್ಸ್ಟ ಫೌಂಡೇಶನ್ ಹಾಗೂ ಕ್ಯಾಡೆನ್ಸ್ ಆರ್ಕಿಟೆಕ್ಚರ್ ಇಂಟರ್ ಡಿಸೈನ್ ನಡುವೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಯಿತು.

ಬೆಂಗಳೂರಿನಲ್ಲಿಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಸಮ್ಮುಖದಲ್ಲಿ ಕಂಪನಿಯ ಪ್ರಧಾನ ಆರ್ಕಿಟೆಕ್ಟ್ ಆರ್.ನರೇಂದ್ರ ಪಿಗಲ್ ಹಾಗೂ ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ



ತರನ್ನುಮ್ ಅವರು ಒಪ್ಪಂದ ಪತ್ರಕ್ಕೆ ಸಹಿ ಹಾಕಿದರು.

ಕಲಬುರಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಸಲುವಾಗಿ ರೂಪಿಸಿರುವ ಕಲಬುರಗಿ ನೆಕ್ಸ್ಟ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲು ಮುಂದಾಗಿದ್ದು, ಈ ನಿಟ್ಟಿನಲ್ಲಿ ಕಲಬುರಗಿ ನಗರದ ಸೌಂದರ್ಯೀಕರಣ ಹಾಗೂ ಸಾರ್ವಜನಿಕರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಈ ಒಪ್ಪಂದಕ್ಕೆ ಸಹಿಹಾಕಲಾಗಿದೆ ಎಂದು ಸಚಿವರು ತಿಳಿಸಿದರು.

ಕಲಬುರಗಿಯಲ್ಲಿ ಲಭ್ಯವಿರುವ ಸುಮಾರು 30 ಎಕರೆ ಪ್ರದೇಶದಲ್ಲಿ ಬಹುಸೌಲಭ್ಯಗಳನ್ನು ಒಳಗೊಂಡ ಉದ್ಯಾನವನ ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಕಲಬುರಗಿ ಅಭಿವೃದ್ಧಿ ಪ್ರಾಧಿಕಾರದ (ಕುಡಾ) ಅಧ್ಯಕ್ಷರಾದ ಮೊಹಮದ್ ಮಝರ್ ಖಾನ್ ಸಭೆಯಲ್ಲಿ ಹಾಜರಿದ್ದು ಮಾಹಿತಿ ನೀಡಿದರು.

ಉದ್ದೇಶಿತ ಉದ್ಯಾನವನದಲ್ಲಿ ಅತ್ಯಾಧುನಿಕ ಶೈಲಿಯ ವಾಯು ವಿಹಾರ ಪಥಗಳು, ಅಪರೂಪದ ವೃಕ್ಷಗಳು ಹಾಗೂ ಹೂವಿನ ಗಿಡಗಳು ಇರಲಿದ್ದು, ಸುಂದರ ಹುಲ್ಲುಗಾವಲು, ಸಾರ್ವಜನಿಕರ ಆಸನಗಳು ಇರಲಿವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರಲ್ಲದೆ, ಈ ಉದ್ಯಾನವನದಲ್ಲಿನ ಕೊಳವನ್ನು ಸುಂದರ ಸರೋವರವಾಗಿ ರೂಪಿಸಲಾಗುವುದು ಎಂದು ಸಚಿವರು ಹೇಳಿದರು.

ಉದ್ಯಾನವನವು ಸುಸಜ್ಜಿತವಾದ ಕ್ರೀಡಾ ಸಂಕೀರ್ಣವನ್ನು ಹೊಂದಲಿದ್ದು, ಕ್ರೀಡಾಪಟುಗಳಿಗೆ ಉತ್ತಮ ತಾಣವಾಗಲಿದೆ ಎಂಬ ಮಾಹಿತಿ ನೀಡಿದ ಸಚಿವರು ಈ ಉದ್ಯಾನವನವು ಮುಕ್ತ ಮಾಹಿತಿ ಕೇಂದ್ರವನ್ನು ಹೊಂದಲಿದೆ ಎಂದೂ ತಿಳಿಸಿದರು.

ಇಲ್ಲಿ ವ್ಯಾಖ್ಯಾನ ಕೇಂದ್ರ, ಕಲಾವಿದರಿಗೆ ಮುಕ್ತ ವಾಯು ಗ್ಯಾಲರಿ ಹೊಂದಲಿದೆ ಎಂದು ಪುರಾತತ್ತ್ವಶಾಸ್ತ್ರ ಇಲಾಖೆಯ ಸಂರಕ್ಷಣಾ ವಾಸ್ತುಶಿಲ್ಪಿ ಶರತ್ ಚಂದ್ರ ಹೇಳಿದರು.

# ಗೋವಾದಲ್ಲಿ ಕನ್ನಡಿಗರ 16 ನೇ ಸಾಂಸ್ಕೃತಿಕ ಸಮ್ಮೇಳನಕ್ಕೆ ಮುಖ್ಯಮಂತ್ರಿ ಪ್ರಮೋದ್ ಸಾವಂತ ಚಾಲನೆ



ಕೊಪ್ಪಳ: ಪಕ್ಕದ ಗೋವಾ ರಾಜ್ಯದ ಬಿಚ್ಚುಲಿಯಂನಲ್ಲಿ 16ನೇ ಬಾರಿಗೆ ಕನ್ನಡಿಗರ ಸಾಂಸ್ಕೃತಿಕ ಸಮ್ಮೇಳನವನ್ನ ಕರ್ನಾಟಕ ಜಾಗೃತಿ ವೇದಿಕೆ ಬೆಂಗಳೂರು ಮತ್ತು ಕರ್ಮಭೂಮಿ ಕನ್ನಡ ಸಂಘ ಬಿಚ್ಚುಲಿಯಂ ಜಂಟಿಯಾಗಿ ಆಯೋಜಿಸಲಾಗಿತ್ತು .

ಅದ್ದೂರಿ ಮೆರವಣಿಗೆಗೆ ಶ್ರೀ ಪ್ರಮೋದ್ ಸಾವಂತ್ ಅವರು ಚಾಲನೆ ನೀಡಿದರು .

751 ಮಹಿಳೆಯರು ಪೂರ್ಣ ಕುಂಬ ಹೊತ್ತು ಗೋವಾದ ಮಹಿಳೆಯರು ಸಮ್ಮೇಳನಾಧ್ಯಕ್ಷ ಶ್ರೀ ಸಂಗನಬಸಪ್ಪ ಬಿರಾದರ ಅವರನ್ನ ತೆರೆದ ಸಾರೋಟದಲ್ಲಿ ವೀರಗಾಸೆ ಡೊಳ್ಳು ಕುಣಿತ ಸಮಾಳ ಹಾಗೂ ಇತರೆ ಕಲಾತಂಡಗಳ ಅದ್ದೂರಿ ಮೆರವಣಿಗೆ ಮೂಲಕ ಸಭಾಂಗಣಕ್ಕೆ ತರಲಾಯಿತು. ಸಮ್ಮೇಳನಾಧ್ಯಕ್ಷ ಶ್ರೀ ಸಂಗನಬಸಪ್ಪ ಬಿರಾದರವರು ಗೋವಾದ ಮುಖ್ಯಮಂತ್ರಿಗಳಿಗೆ ಕನ್ನಡದ ಶಾಲು ಹಾಕುವ ಮೂಲಕ ಅವರನ್ನ ಸ್ವಾಗತಿಸಿದರು.

ಸಂಚಾಲಕರಾದ ಮಹೇಶ್ ಬಾಬು ಸುರ್ವೆಯವರು ಗೋವಾದ ಮುಖ್ಯಮಂತ್ರಿಗಳಾದ ಶ್ರೀ ಪ್ರಮೋದ್ ಸಾವಂತ್ ಅವರನ್ನ ಮೈಸೂರ್ ಪೇಟ ತೋಡಿಸಿ ಹಾರ ನನಪಿನ ಕಾಣಿಕೆ ಫಲ ಪುಷ್ಪ ತಾಂಬೂಲಗಳೊಂದಿಗೆ ನೆರೆದಿದ್ದ ಸಹಸ್ರಾರು ಕನ್ನಡಿಗರ. ಪ್ರೇಕ್ಷಕರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಹುಕ್ಕೇರಿಯ ಶ್ರೀ ಚಂದ್ರಶೇಖರ್ ಶಿವಾಚಾರ್ಯ ಮಹಾಸ್ವಾಮಿಜಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಅಧ್ಯಕ್ಷ ಸೋಮಣ್ಣ ಬೇವಿನಮರ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ ಕರ್ನಾಟಕ ಹಾಪ್ ಕಾಮ್ಸ್ ಅಧ್ಯಕ್ಷ ಮಹಾದೇವಪ್ಪ ಕಟ್ಟಗಿ ಗೋವಾದ ಮೆಚ್ಚುಲಿಯಂನ ಮಾಜಿ ನಗರಸಭಾ ಸದಸ್ಯ ಭಗವಾನ್ ಹಲಮನಕರ್ ಕರ್ಮ ಭೂಮಿ ಕನ್ನಡ ಸಂಘದ ಅಧ್ಯಕ್ಷ ಶ್ರೀ ಹನುಮಂತರೆಡ್ಡಿ ಶಿರೂರು ಕರ್ನಾಟಕ ಜಾಗೃತಿ ವೇದಿಕೆಯ ಅಧ್ಯಕ್ಷ ಕೆ ಎಲ್ ಕುಂದರಗಿ , ಉಪಾಧ್ಯಕ್ಷ ರವೀಂದ್ರ ತೋಟಗೇರ್ ಕಾರ್ಯದರ್ಶಿ ಜೀ ನಂದೀಶ್ ಬೆಂಗಳೂರು ಸಹ ಕಾರ್ಯದರ್ಶಿ ಪ್ರಕಾಶ್ ಅಳ್ಳೊಳ್ಳಿ ಬೆಳಗಾವ್ ಮದ್ದು ಕರ್ಮ ಭೂಮಿ ಕನ್ನಡ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು

# 41 ದಿನಗಳ ಮಹಾ ಪವಿತ್ರ ಉಪವಾಸ ವ್ರತ ಕಾರ್ಯಕ್ರಮ

ರಾಯಚೂರು,ಮಾ.20-

ನಗರದ ಸಾರ್ವಜನಿಕ ಗ್ರಂಥಾಲಯದಲ್ಲಿ ಹತ್ತಿರವಿರುವ ಓಂ ಸಾಯಿ ಧ್ಯಾನ ಮಂದಿರದ ಸಂಸ್ಥಾಪಕರು ಹಾಗು ಧರ್ಮಾಧಿಕಾರಿಗಳಾದ ಸಾಯಿ ಕಿರಣ್ ಆದೋನಿ ಗುರೂಜಿಯವರು 41 ದಿನಗಳ ಮಹಾ ಪವಿತ್ರ ಉಪಾಸಭತವನ್ನು ಕೈಗೊಂಡಿದ್ದು ಬರುವ 26 ಆರನೇ ತಾರೀಕು ಸಮಾಪ್ತಿ ಯ ಕಾರ್ಯಕ್ರಮ ಹಾಗೂ ಶ್ರೀ ರಾಮನವಮಿಯ ಪ್ರಯುಕ್ತ ವಿಶೇಷ ಕಾರ್ಯಕ್ರಮದ ಕರಪತ್ರವನ್ನು ದಿನಾಂಕ 19/ .03.2026 ರಂದು ಬಿಡುಗಡೆ ಮಾಡಿ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ , ಮಹಾಶಿವರಾತ್ರಿಯ ಪವಿತ್ರ ಸಂದರ್ಭದಲ್ಲಿ ಸಾಯಿ ಕಿರಣ್ ಆದೋನಿ ಗುರುಜಿಯವರು. ಸಮಸ್ತ ಸಾಯಿ ಭಕ್ತರ ಕಲ್ಯಾಣ. ಆರೋಗ್ಯ.ಶಾಂತಿ. ಮತ್ತು ಮನು ಅಭಿಲಾಷೆಗಳ ಪರಿಪೂರ್ಣತೆಗಾಗಿ 41 ದಿನಗಳ ಮಹಾ ಪವಿತ್ರ ಉಪವಾಸ ವೃತವನ್ನು ಆಚರಿಸುವ ದಿವ್ಯ ಸಂಕಲ್ಪವನ್ನು ಅವರು ಮಾಡಿ ಅದನ್ನು ಸ್ವೀಕರಿಸಿದ್ದರು . ಈ ಅವಧಿಯಲ್ಲಿ ಅವರು ಸಂಪೂರ್ಣ ಅನ್ನ ತ್ಯಾಗ.ಮಾಡಿ ಹಣ್ಣಿನ ರಸ.ಹಾಗೂ ಹಾಲಿನೊಂದಿಗೆ ನಿಯಮ ಬದ್ಧ ಉಪವಾಸದಲ್ಲಿದ್ದು. ಪ್ರತಿದಿನ ಬಾಬಾನ ಧ್ಯಾನ. ಭಜನೆ. ಮತ್ತು ಸಾಯಿಯ ನಾಮ ಜಪ. ಮಾಡುತ್ತಾ ತಮ್ಮ ಕಾರ್ಯವನ್ನು ಮಾಡಿದ್ದಾರೆ.ಈ ಪವಿತ್ರ ಉಪವಾಸ ವ್ರತ ಮಾರ್ಚ್ 26 ಸಮಾಪ್ತಿ ಹಾಗೂ ಶ್ರೀ ರಾಮನವಮಿಯ ಮಹೋತ್ಸವದ ಪ್ರಯುಕ್ತ ಅಂದಿನ ದಿನ ವಿಶೇಷ ಕಾರ್ಯಕ್ರಮವನ್ನು ಆಯೋಜನೆಯನ್ನು ಮಾಡಲಾಗಿದೆ.ಬೆಳಗ್ಗೆ 6:30ಕ್ಕೆ ಪಂಚಾಮೃತ ಅಭಿಷೇಕ.ಬೆಳಗ್ಗೆ ಎಂಟಕ್ಕೆ ಧನ್ವಂತ್ರಿಯ ಹೋಮ.ಮಧ್ಯಾಹ್ನ 12:30ಕ್ಕೆ ಮಹಾಮಂಗಳಾರತಿ ಮಧ್ಯಾಹ್ನ 1:00ಗೆ ವಿಶೇಷ ಮಹಾಪ್ರಸಾದ.ಸಂಜೆ 6.00 ಗಂಟೆಗೆ ಧೂಪ ಆರತಿ ರಾತ್ರಿ 9:00ಗೆ ಕೆಜ್ ಆರತಿ ಈ ರೀತಿಯಾಗಿ ಸಂಪೂರ್ಣ ಒಂದು ದಿನ ವಿಶೇಷ ರೀತಿಯಲ್ಲಿ ಓಂ ಸಾಯಿ ಧ್ಯಾನಮಂದಿರದಲ್ಲಿ ಕಾರ್ಯಕ್ರಮವನ್ನು ಆಯೋಜನೆಯನ್ನ ಮಾಡಲಾಗಿದೆ. ಸಾಯಿ ಮಂದಿರದ ಸಕಲ ಸದ್ಭಕ್ತರು ಕಾರ್ಯಕ್ರಮದಲ್ಲಿ ಹೆಚ್ಚಿನ ರೀತಿಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ಡಾ. ಬಿರಾದಾರ ಹೇಳಿದರು. ಈ ಮಹಾ ಪವಿತ್ರ ಉಪವಾಸ ವ್ರತವನ್ನು ಕುರಿತು ಮಂದಿರದ



ಸಂಸ್ಥಾಪಕರು ಮತ್ತುಧರ್ಮ ಅಧಿಕಾರಿಗಳಾದ ಶ್ರೀ ಸಾಯಿ ಕಿರಣ್ ಆದೋನಿ ಗುರೂಜಿ ಅವರು ಮಾತನಾಡುತ್ತಾ.ಸಾಯಿಬಾಬನ ಮೇಲಿರುವ ಭಕ್ತಿ.ಜೊತೆಗೆ ಈ ಮಂದಿರದ ಸಕಲ ಸದ್ಭಕ್ತರ ಕಲ್ಯಾಣಕ್ಕಾಗಿ ಅವರ ಆರೋಗ್ಯಕ್ಕಾಗಿ ಶಾಂತಿಗಾಗಿ ಹಾಗೂ ಮನೋ ಅಭಿಲಾಷೆಗಳ ಪರಿಪೂರ್ಣತೆಗೆ ನಾನು ದಿನಗಳ ಮಹಾ ಪವಿತ್ರ ಉಪವಾಸ 41ವೃತವನ್ನ ಕೈಗೊಂಡಿದ್ದೇನೆ.ಆ ಸಾಯಿಬಾಬನ ಕೃಪಾ ಆಶೀರ್ವಾದದಿಂದ. ಈ ಮಂದಿರದ ಸಕಲ ಸದ್ಭಕ್ತರ ಅಭಿಮಾನ ಮತ್ತು ಸಂಕಲ್ಪದಿಂದ ನಾನು ವ್ರತವನ್ನು ಇದೆ ಬರುವ ಮಾರ್ಚ್ 26 ಮುಗಿಲಿದ್ದು ಅಂದಿನ ದಿನ ವಿಶೇಷ ಕಾರ್ಯಕ್ರಮಗಳನ್ನು ಸಾಯಿ ಮಂದಿರದಲ್ಲಿ ಆಯೋಜನೆ ಮಾಡಲಾಗಿದ್ದು. ಸದ್ಭಕ್ತರು ಆ ಒಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಿರಡಿ ಸಾಯಿಬಾಬನ ಕೃಪ ಕಟಾಕ್ಷ ಗೆ ಒಳಗಾಗಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಪ್ರತಾಪ್ ರೆಡ್ಡಿ ಅವರು ಅರ್ಥಪೂರ್ಣವಾದ ಸಾಯಿ ಬಾಬಾ ರವರ ಕುರಿತು ಹಾಡನ್ನು ಹಾಡಿದರು. ಶೋಭಾ ಮಾಲಿ ಪಾಟೀಲ್ ಬಾಬಾ ಜೀವನ ಚರಿತ್ರೆ ಓದಿದರು.ಈ ಸಂದರ್ಭದಲ್ಲಿ ಸುಭಾಷಿಣಿ.ಅಶ್ವಿನಿ. ಸುರೇಶ್ ಸಿಂಗ್. ಯೋಗೀಶ್. ಓಂ ಸಾಯಿ ಜ್ಞಾನ ಮಂದಿರದ ಚಾರಿಟೇಬಲ್ ಟ್ರಸ್ಟ್ ನ ವ್ಯವಸ್ಥಾಪಕರಾದ ಶ್ರೀಮತಿ ಅನಿತಾ ಸಾಯಿ ಕಿರಣ್ ಆದೋನಿ. ಹಾಗೂ ಸಾಯಿ ಮಂದರದ ಸದ್ಭಕ್ತರು ಉಪಸ್ಥಿತರಿದ್ದರು. ಮಂಗಳಾರತಿ ನಂತರ ಸಕಲ ಸದ್ಭಕ್ತರಿಗೆ ಪ್ರಸಾದ್ ವ್ಯವಸ್ಥೆಯನ್ನು ಮಾಡಲಾಯಿತು.

# ಮಾನ್ವಿಯಲ್ಲಿ ಬಡವರಿಗೆ ಆಹಾರ ಕಿಟ್ ವಿತರಣೆ : ಹನುಮಂತ ಕೋಟೆ

ಮಾನ್ವಿ ಮಾ 19

ತಾಲೂಕಿನ ಸರ್ವಧರ್ಮ ಸೇವಾ ವೆಲ್ಫೇರ್ ಟ್ರಸ್ಟ್ ವತಿಯಿಂದ ಭಾರತೀಯ ಸೇವಾ ಸಮಿತಿ ರಾಷ್ಟ್ರೀಯ ಅಧ್ಯಕ್ಷ ಹೂಡಿ ರಾಮಚಂದ್ರ ಚಿನ್ನಿ ಹಾಗೂ ಕನಸು ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಯುವ ಶಕ್ತಿ ಸೂರಿ ಇವರ ಮಾರ್ಗದರ್ಶನದಲ್ಲಿ ಇಂದು ಪಟ್ಟಣದ ಪಂಪಾ ಗಾರ್ಡನ್ ಹತ್ತಿರದ ಕಛೇರಿಯಲ್ಲಿ ಇಂದು ಬಡ ಮುಸ್ಲಿಂ ಹಾಗೂ ಬಡ ಹಿಂದುಗಳಿಗೆ ಆಹಾರ ಕಿಟ್ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಪಟ್ಟಣದ ಪಂಪಾ ಗಾರ್ಡನ್ ಹತ್ತಿರದ ಸಂಸ್ಥೆಯ ಕಛೇರಿ ಮುಂಭಾಗದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು

ಸತತ ಮೂರು ವರ್ಷಗಳಿಂದ ಬಡವರ ಸೇವಾ ಕೇಂದ್ರದ ಮೂಲಕ ಸರ್ವ ಜನಾಂಗದ ದೀನದಲಿತರಿಗೂ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಆಹಾರ ಕಿಟ್ ವಿತರಣೆ ಮಾಡುವ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಗಮನಾರ್ಹವಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ಹಸನ್ ಮೀನಾಜ್ ಹಸನ್ ಅವರು, ''ಮನುಷ್ಯ ಮನುಷ್ಯನನ್ನು ಪ್ರೀತಿಸಿ ಮಾನವೀಯತೆ ಹಾಗೂ ಸಹಾಯ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು. ಹನುಮಂತ ಕೋಟೆಯವರ ಸೇವಾ ಕಾರ್ಯಕ್ರಮಗಳು ಶ್ಲಾಘನೀಯ. ಸರ್ವಧರ್ಮ ಸೇವಾ ಕಾರ್ಯದಲ್ಲಿ ನಾವೆಲ್ಲರೂ ಪಾಲ್ಗೊಂಡು ನಮ್ಮ ಕೈಲಾದ ಸಹಾಯವನ್ನು ಮಾಡಬೇಕು'' ಎಂದು ಅಭಿಪ್ರಾಯಪಟ್ಟರು.

ಇನ್ನೊಬ್ಬರು ಮಾತನಾಡಿದ ಶ್ರೀ ರೇವಣ ಸಿದ್ದಯ್ಯ ಹಿರೇಮಠ ಅವರು, ''ಉಳ್ಳಾಗೂ ಬೆಟ್ಟದಡಿ ಮನೆಗೆ ಮಲ್ಲಿಗೆ, ಎಲ್ಲರೊಳಗೆ ಒಂದಾಗು ಮಂಕುತಿಮ್ಮ ಎಂಬಂತೆ, ಬಚ್ಚಿಟ್ಟಿದ್ದು ಪರರಿಗೆ ಕೊಡುವ ಮನೋಭಾವದಿಂದ ಹನುಮಂತ



ಕೋಟೆಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಸುಮಾರು ಐದು ವರ್ಷಗಳಿಂದ ನಿರಂತರ ಸೇವೆ ಸಲ್ಲಿಸುತ್ತಿದ್ದು, ಇನ್ನಷ್ಟು ಉತ್ತಮ ಕಾರ್ಯಗಳಿಗೆ ನಾವು ಸಹ ಬೆಂಬಲ ನೀಡಬೇಕು'' ಎಂದು ಹೇಳಿದರು.

ಕಾರ್ಯಕ್ರಮದ ಕೊನೆಯಲ್ಲಿ 30 ಆಹಾರ ಕಿಟ್‌ಗಳನ್ನು ದಿನ ದುರ್ಬಲರಿಗೆ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಿಪ್ಪಣ್ಣ ಬಾಗಲವಾಡ (ವಕೀಲರು), ಡಾ. ಸೈಯದ್ ಮೀನಾಜ್ ಉಲ್ಲಾಸನ್, ಮೋಹಿನ್ ಖಾನ್ (ಸಮಾಜ ಸೇವಕರು), ಜಿ.ಎಚ್.ನವೀನ್ ಕುಮಾರ್ ಕುರುಡಿ, ಶಿವರಾಜ್ ಉಮ್ಳಿ, ಹೊಸೂರು ಮೂಕಪ್ಪ ಕಟ್ಟಿಮನಿ ಹಾಗೂ ಶರಣಕುಮಾರ ಮುದ್ದಮಗುಡ್ಡಿ ಉಪಸ್ಥಿತರಿದ್ದರು

## ತ್ವರಿತಗತಿಯಲ್ಲಿ ಕಾಲುವೆ ಕಾಮಗಾರಿ ಪೂರ್ಣಗೊಳಿಸಿ

ಗಂಗಾವತಿ,ಮಾ.18-

ಕೊಪ್ಪಳ ತಾಲೂಕಿನ ಬಸಾಪುರ ಸಮೀಪ ತುಂಗಭದ್ರಾ ಎಡದಂಡೆ ಕಾಲುವೆಯ ಕಾಲುವೆ ಒಡೆದು ಅಪಾರ ಪ್ರಮಾಣದ ನೀರು ವ್ಯರ್ಥವಾಗಿ ಹರಿಯುತ್ತಿರುವುದು ಹಾಗೂ ನೂರಾರು ಎಕರೆ ಭತ್ತದ ಗದ್ದೆಗಳು ಮತ್ತು ರೆಸಾರ್ಟ್‌ಗಳಿಗೆ ನೀರು ನುಗ್ಗಿ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ ಕೂಡಲೆ ಅಧಿಕಾರಿಗಳು ಕಾಲುವೆಯ ಕಾಮಗಾರಿ ಪೂರ್ಣಗೊಳಿಸ ಬೇಕೆಂದು ಶಾಸಕ ಗಾಲಿ ಜನಾದರ್ನ ರೆಡ್ಡಿ ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು ದಶಕಗಳಿಂದ ಕಾಲುವೆಗಳ ಸಮರ್ಪಕ ನಿರ್ವಹಣೆ ಇಲ್ಲದಿರುವು ದರಿಂದ ಇಂತಹ ದುರ್ಘಟನೆಗಳು ಮರುಕಳಿಸುತ್ತಿರುವುದು ಗಂಭೀರ ಆತಂಕಕ್ಕೆ ಕಾರಣವಾಗಿದೆ. ತುಂಗ ಭದ್ರಾ ಜಲಾಶಯದಲ್ಲಿ ಕ್ರಸ್ಟ್ ಗೇಟ್ ಅಳವಡಿಕೆ ನಡೆಯುತ್ತಿರುವ ಈ ಸಂದರ್ಭವನ್ನು ಸದುಪಯೋಗಪಡಿಸಿಕೊಂಡು ಕಾಲುವೆಗಳ ಸಮಗ್ರ ದುರಸ್ತಿ ಕಾರ್ಯ ಕೈಗೊಳ್ಳಬೇ ಕಾಗಿದ್ದರೂ, ಸರ್ಕಾರವು ನಿರ್ಲಕ್ಷ್ಯ ವಹಿಸಿರುವುದು ವಿಷಾದನೀಯ ಎಂದು ತಿಳಿಸಿದದ್ದಾರೆ.

ಕುಡಿಯುವ ನೀರಿನ ಕೊರತೆ ಹಾಗೂ ಕೃಷಿ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ನೀರಾವರಿ ಇಲಾಖೆಯ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ, ಹಾನಿಗೊ ಳಗಾದ ಪ್ರದೇಶಗಳಲ್ಲಿ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳ ಬೇಕು. ಜೊತೆಗೆ ಕಾಲುವೆ ದುರಸ್ತಿ ಕಾರ್ಯವನ್ನು ಯುದ್ದೋಪಾದಿ ಯಲ್ಲಿ ಕೈಗೊಂಡು ಪೂರ್ಣಗೊಳಿ ಸುವಂತೆ ಒತ್ತಾಯಿಸಿದ್ದಾರೆ.

# ಎಸ್ಎಸ್ಎಲ್ಸಿ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಲು ಕರೆ: ವಿನಯಕುಮಾರ ಗಣಾಚಾರಿ





ಲಿಂಗಸುಗೂರು: ವಿದ್ಯಾರ್ಥಿಗಳು ಆತ್ಮವಿಶ್ವಾಸದೊಂದಿಗೆ ಪರೀಕ್ಷೆಯನ್ನು ಬರೆಯಬೇಕು. ನಿಮ್ಮ ನಿರಂತರದ ಪ್ರಯತ್ನಕ್ಕೆ ಪ್ರತಿಫಲ ಸಿಕ್ಕೆಸಿಗುತ್ತದೆ. ಧೈರ್ಯವಾಗಿ ಪರೀಕ್ಷೆ ಎದುರಿಸಿ ಎಂದು ಉಮಾ ಮಹೇಶ್ವರಿ ಸಂಸ್ಥೆಯ ಅಧ್ಯಕ್ಷ ವಿನಯಕುಮಾರ ಗಣಾಚಾರಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪಟ್ಟಣದ ಕರಡಕಲ್ಲನ ಶ್ರೀ ಉಮಾಮಹೇಶ್ವರಿ ಸಮೂಹ ಶಿಕ್ಷಣ ಸಂಸ್ಥೆಯ ಹಾಗೂ ಜ್ಞಾನಗಂಗಾ ಪ್ರೌಢಶಾಲೆಯಲ್ಲಿ ಬುಧವಾರ ಎಸ್.ಎಸ್.ಎಲ್.ಸಿ ಪರೀಕ್ಷಾರ್ಥಿಗಳಿಗೆ ಹೂಗುಚ್ಛ ನೀಡುವ ಮೂಲಕ ಶುಭಹಾರೈಸಿ ಮಾತನಾಡಿ, ಉತ್ತಮ ಅಂಕಗಳಿಸುವ ಮೂಲಕ ಉಜ್ವಲ ಭವಿಷ್ಯ ರೂಪಿಸಿಕೊಳ್ಳಿರಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ಆನಂದ ಹಿರೇಮಠ, ಸಂಯೋಜಕ ಸಂಗಯ್ಯ ಸಿಂದಗಿಮಠ, ಬಸವರಾಜ ಮರೋಳ, ಮೌನೇಶ ಬಡಿಗೇರ, ಶರಣಬಸವ ಹೂಗಾರ ದೈಹಿಕ ಶಿಕ್ಷಕ ಮಹಮ್ಮದ್ ಪೈಗಂಬರ ಟೆಂಗುಂಟಿ, ರಾಜು ಮಸ್ಕಿ, ಸಂಗಮೇಶ ಹಿರೇಮಠ ಮತ್ತೀತರರು ಇದ್ದರು.

ಕೂಡಲೇ ಸಮೀಕ್ಷೆ ಕಾರ್ಯ ಕೈಗೊಂಡು. ಹಾನಿಯಾದ ಬೆಳೆ. ಜಮೀನು ಮತ್ತು ಗದ್ದೆಗಳನ್ನು ಪರಿಶೀಲನೆ ಮಾಡಿ ಭತ್ತ ಬೆಳೆದ ರೈತರಿಗೆ. ಪರಿಹಾರ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಿ.: ಶಾಸಕ ಹಂಪನಗೌಡ ಬಾದರ್ಲಿ

# ಸಹಸ್ರಾರು ಭಕ್ತರ ಮದ್ಯೆ ಅದ್ಧೂರಿಯಾಗಿ ಜರುಗಿದ !ಶ್ರೀಕರಿಯಮ್ಮ ದೇವಿ ಜಾತ್ರಾ ಮಹೋತ್ಸವ

ಕೊಪ್ಪಳ,ಮಾ.20-

ತಾಲೂಕಿನ ಕಿನ್ನಾಳ ಗ್ರಾಮದ ಶ್ರೀ ಕರಿಯಮ್ಮ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಗುರುವಾರ ಸಂಜೆ ಸಂಭ್ರಮದಿದ ನಡೆಯಿತು.



ಜಾತ್ರಾ ಮಹೋತ್ಸವ ಅಂಗವಾಗಿ ಬೆಳಿಗ್ಗೆಯಿಂದಲೇ ಶ್ರೀ ದೇವಿಗೆ ವಿಶೇಷ ಪೂಜಾ ಕಾರ್ಯಕ್ರಮ ಜರುಗಿದವು.

ದೇವಸ್ಥಾನದಲ್ಲಿ ಭಕ್ತಾಧಿಗಳು ದೇವಿಗೆ ಕಾಯಿ ಕರ್ಪೂರ ನೈವೇದ್ಯ ಸಲ್ಲಿಸಿ ದರ್ಶನ ಪಡೆದರು. ಮದ್ಯಾಹ್ನ ಕರಿಯಮ್ಮ ದೇವಿಯ ಪೂಜಾರಿಯವರ ಮನೆಯಿಂದ ದೇವಿಯ ಪಲ್ಲಕ್ಕಿಯು, ಡೊಳ್ಳು ವಾದ್ಯ ಮೇಳಗಳ ಮೆರವಣಿಗೆಯೊಂದಿಗೆ ತರಲಾಯಿತು. ಶ್ರೀ ದೇವಿಯ ಪಲ್ಲಕ್ಕಿಯು ಸಹಸ್ರಾರು ಭಕ್ತರ ಜಯಘೋಷದೊಂದಿಗೆ ಮೆರವಣಿಗೆ ಪ್ರಾರಂಭವಾಯಿತು. ಬಸವೇಶ್ವರ ವೃತ್ತ ಮಾರ್ಗವಾಗಿ ಅಂಬೇಡ್ಕರ್ ವೃತ್ತದಿಂದ ದೇವಸ್ಥಾನ ತಲುಪಿತು.

ಸಾಯಂಕಾಲ ವಿಶೇಶ ಪೂಜೆಯೊಂದಿಗೆ ರಥೋತ್ಸವಕ್ಕೆ ಚಾಲನೆ ಸಿಗುತ್ತಿದ್ದಂತೆ, ಭಕ್ತರು ರಥಕ್ಕೆ ಉತ್ತತ್ತಿ ಹಾಗೂ ಬಾಳೆಹಣ್ಣು ಸಮರ್ಪಿಸಿ ಭಕ್ತಿ ಹರಕೆ ತೀರಿಸಿದರು.

ರಥೋತ್ಸವದ ಮುಂದೆ ಡೊಳ್ಳಿನ ಮೇಳ ಹಾಗೂ ವಿವಿಧ ವಾದ್ಯ ಮೇಳಗಳು ಗಮನ ಸೆಳೆದವು. ರಥೋತ್ಸವವು ಪಾದಗಟ್ಟೆವರೆಗೂ ತಲುಪಿ ನಂತರ ಮರಳಿ ಆಗಮಿಸಿತು.

ರಥೋತ್ಸವ ಯಶಸ್ವಿಯಾಗಿ ಸ್ಥಳಕ್ಕೆ ಬಂದು ನಿಂತಾಗ ಭಕ್ತರು ಚಪ್ಪಾಳೆ ತಟ್ಟಿ, ಜಯಘೋಷಣೆ ಕೂಗಿದ್ದು ಮುಗಿಲು ಮುಟ್ಟಿತು.

ಬೇಸಿಗೆಯ ನಡುವೆಯು ಬಿಸಿಲನ್ನು ಲೆಕ್ಕಿಸದೇ ಜಾತ್ರೋತ್ಸವದಲ್ಲಿ ಸಹಸ್ರಾರು ಸಂಖ್ಯೆಯ ಭಕ್ತರು ಪಾಲ್ಗೋಂಡು ಸೇವೆಯಲ್ಲಿ ನಿರತರಾಗಿದ್ದು ಅಮ್ಮನ ಶಕ್ತಿಯ ಅವತಾರವೇ ಸರಿ ಎನ್ನುವ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬಂದವು.ಒಟ್ಟಾರೇ ಮಹಿಳೆಯರು, ಮಕ್ಕಳು, ಹಿರಿಯರು, ಯುವಕರು ಜಾತ್ರೆಯ ಹರ್ಷವನ್ನು ವ್ಯಕ್ತಪಡಿಸಿದರು.

# ನೂತನ ಜಿಲ್ಲಾ ಕಾರ್ಯದರ್ಶಿ ಮುಜಾಹಿದ್ ಮರ್ಚೆಡ್ ರವರಿಂದ ಶಾಸಕ ದದ್ದಲ್‌ಗೆ ಯುಗಾದಿ ಶುಭಾಶಯ



ರಾಯಚೂರು,ಮಾ.20- ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕದ ರಾಜ್ಯ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸನ್ಮಾನ್ಯ ಶ್ರೀ ಕೆ. ಅಬ್ದುಲ್ ಜಬ್ಬಾರ್ ಇವರ ಆದೇಶದ ಮೇರೆಗೆ, ಹಾಗೂ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಹಾಗೂ ಶ್ರೀ ಬಸನಗೌಡ ದದ್ದಲ

ಜನಪ್ರಿಯ ಶಾಸಕರು ರಾಯಚೂರು ಗ್ರಾಮೀಣ ಹಾಗೂ ಕರ್ನಾಟಕ ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆದ ಶ್ರೀ ಬಸನಗೌಡ ದದ್ದಲ್ ಇವರ ಶಿಪ್ಪಾರಸ್ಸಿ ನ ಮೇರೆಗೆ ಕಾಂಗ್ರೆಸ್ ಪಕ್ಷದ ಸಂಘಟನೆಯ ಹಿತದೃಷ್ಟಿ ಯಿಂದ ಶ್ರೀ ಮೊಹಮ್ಮದ್ ಮುಜಾಹಿದ್ ಮರ್ಚೆಡ್ ತಂದೆ ಉಸ್ಮಾನ ಅಲಿ, ಸಾ.ಮರ್ಚೆಡ್ ತಾ.ಜಿ. ರಾಯಚೂರು ಇವರನ್ನು ಅಲ್ಪಸಂಖ್ಯಾತರ ಘಟಕದ ರಾಯಚೂರು ಜಿಲ್ಲಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿ.. ತಕ್ಷಣದಿಂದಲೇ ಜವಬ್ದಾರಿಯನ್ನು ವಹಿಸಿಕೊಂಡು ಪಕ್ಷದ ಸಂಘಟನೆ ಜೊತೆಗೆ ಅಲ್ಪಸಂಖ್ಯಾತ ಸಮುದಾಯದ ಅಭಿವೃದ್ಧಿಯಲ್ಲಿ ತೊಡಗಬೇಕೆಂದು ಆದೇಶಿಸಿದೆ, ಈಗಾಗಲೆ ಮುಜಾಹಿದ್ ಮರ್ಚೆಡ್ ಇವರು ದೇವಸೂಗೂರು ಬ್ಲಾಕ್ ಕಾಂಗ್ರೆಸ್ ಸಮಿತಿಯ (ಅ.ವಿ) ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿ ಅಚ್ಚುಕಟ್ಟಾಗಿ ಪಕ್ಷನಿಷ್ಟೆ ಹಾಗೂ ಅಲ್ಪಸಂಖ್ಯಾತರ ಹೊರತುಪಡಿಸಿ ಎಲ್ಲಾ ಜನರ ಏಳಿಗಾಗಿ ಕಾರ್ಯನಿರ್ವಹಿಸಿರುತ್ತಾರೆ. ಕಾರಣ ಇವರ ಪಕ್ಷನಿಷ್ಟೆ, ಸಾಮಾಜಿಕ ಕಾಯರ್ಗಗಳನ್ನು ನೋಡಿ, ಜಿಲ್ಲಾ ಮಟ್ಟದ ಜವಬ್ದರಿಯನ್ನು ನೀಡಲಾಗಿದೆ ಎಂದು ಶ್ರೀ ಬಸನಗೌಡ ದದ್ದಲ್ ರವರು ಆದೇಶ ಪ್ರತಿ ನೀಡಿ ಮಾತನಾಡಿದರು, ಮುಜಾಹಿದ್ ಮರ್ಚೆಡ್ ಬಳಗದಿಂದ ಬಸನಗೌಡ ದದ್ದಲ್ ರವರಿಗೆ ಯುಗಾದಿ ಶುಭಾಶಯ ತಿಳಿಸಿದರು ದದ್ದಲ್ ರವರು ಎಲ್ಲರಿಗೂ ರಂಜಾನ್ ಹಬ್ಬದ ಮುಂಚಿತ ಶುಭಾಶಯ ತಿಳಿಸಿದರು, ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರುಗಳಾದ ಸೈಯದ್ ಸಾಬ್ ಮನ್ಸಲಾಪೂರು, ಬಷೀರ್ ಅಹ್ಮದ್ ಹಳ್ಳಿ, ಉಪಾಧ್ಯಕ್ಷರು , ಮಲ್ಲಿಕಾರ್ಜುನ ನಾಯಕ್, ಡಾ.ತಬರೇಜ್, ಸಾದಿಕ್ ಕಾಡ್ಲೂರು, ದೌಲತ್ ಗಣಮೂರು, ಮಹೇಬೂಬ್ ಮರ್ಚೆಡ್, ಗೌಸ್ ಪಟೇಲ್, ಬಾಬು ಖಾದ್ರಿ,ಮಾಸೂಮ್ ಶರೀಫ್, ಮೈನು, ಅನ್ವರ್ ಶೇಖ್, ಶೇಖ್ ಹಸನ್,ರಫಿಬುಲೆಟ್, ಫಯಾಜ್ ನವಲಕಲ್, ನಿಜಾಮ್ ಮರ್ಚೆಡ್, ಸಮೀರ ಮೊಹಮ್ಮದ್ ಇಸ್ಮಾಯಿಲ್, ಯಾಸೀನ್ ಹಾಗೂ ಆನೇಕರು ಹಾಜರಿದ್ದರು.

# ಹಾಳೂರ ಲಕ್ಷ್ಮಿ ದೇವಸ್ಥಾನ ನಿರ್ಮಾಣಕ್ಕೆ ಮುಂದಾದ ಗ್ರಾಮಸ್ಥರು!ಅಡಿಗಲ್ಲು ಸಮಾರಂಭದಲ್ಲಿ ಭಾಗಿಯಾದ ಮುಖಂಡರು



ಅಫಜಲಪುರ:ತಾಲೂಕಿನ ಚಿನಮಳ್ಳಿ ಗ್ರಾಮದಲ್ಲಿ ಹಾಳೂರ ಲಕ್ಷ್ಮಿ ನೂತನ ದೇವಸ್ಥಾನ ಕಟ್ಟಡಕ್ಕೆ ಅಡಿಗಲ್ಲು ಸಮಾರಂಭ ಗ್ರಾಮದ ಮುಖಂಡರ ಸಮುಖದಲ್ಲಿ ನೇರವೇರಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಲಕ್ಷ್ಮಣಗೌಡ ಪಾಟೀಲ ಹಲವು ವರ್ಷಗಳ ಇತಿಹಾಸವುಳ್ಳ ಹಾಳೂರ ಲಕ್ಷ್ಮಿ ದೇವಸ್ಥಾನವು ಬಹುದಿನಗಳಿಂದ ನೆನೆಗುದಿಗೆ ಬಿದ್ದಿದೆ. ದೇವಸ್ಥಾನದ ನೂತನ ಹೊಸ ಕಟ್ಟಡ ನಿರ್ಮಾಣ ಮಾಡಲು ಗ್ರಾಮಸ್ಥರು ಹೊಸ ಉತ್ಸಾಹ ತೊರುತ್ತಿದ್ದಾರೆ.ಆದ್ದರಿಂದ ಗ್ರಾಮದ ಹಾಳೂರ ಲಕ್ಷ್ಮಿ ದೇವಿ ನೂತನ ಕಟ್ಟಡಕ್ಕೆ ಕಾರ್ಯಕ್ಕೆ ಇಂದು ಅಡಿಗಲ್ಲು ಸಮಾರಂಭ ನೇರವೇರಿಸಲಾಗಿದೆ ಎಂದರು.

ಈ ಕಾರ್ಯಕ್ರಮ ದಲ್ಲಿ ಮುಖಂಡರಾದ, ಶ್ರೀ ಗುರುಲಿಂಗಯ್ಯ ಸ್ವಾಮಿ, ಸಂಗಯ್ಯ ಸ್ವಾಮಿ, ನಾಗರಾಜ್ ಮೇಳಕುಂದಿ, ಶಾಂತು ಗುಜ್ಜಾ, ಶರಣಬಸಪ್ಪ ಕಲಶೆಟ್ಟಿ, ಮಲ್ಲೇಶಿ ತಳವಾರ ಸಿದ್ದು ಹೂಗಾರ ಯಮನಪ್ಪ ಇಟಗಿ, ಶರಣು ಗುಜ್ಜಾ, ಚಂದ್ರಕಾಂತ ನೆಲೋಗಿ, ಗುಂಡಪ್ಪ ಹೂಗಾರ ಮಲ್ಲಣ್ಣ ಎಡೆನ್, ಶಕುಂತಲಿ ತಾಂಬೋಳಿ, ಮಲ್ಲಪ್ಪ ನೈಕೋಡಿ, ರುದ್ರಗೌಡ ಎಡೆನ್, ಸೇರಿ ದಂತೆ ಗ್ರಾಮಸ್ಥರು ಇನ್ನಿತರ ಮುಖಂಡರು ಭಾಗಿಯಾಗಿದ್ದರು.

ಡಿಸ್ಕಲೈಮರ್:-ಈ ಪತ್ರಿಕೆಯಲ್ಲಿ ಪ್ರಕಟವಾಗುವ ಸುದ್ದಿ, ಅಭಿಪ್ರಾಯಗಳು, ಚಿತ್ರಗಳು ಹಾಗೂ ಮಾಹಿತಿಗಳು ವಿಶ್ವಾಸಾರ್ಹ ಮೂಲಗಳ ಆಧಾರದ ಮೇಲೆ ಸಾರ್ವಜನಿಕ ಹಿತಾಸಕ್ತಿ ಮತ್ತು ಜಾಗೃತಿಗಾಗಿ ಮಾತ್ರ ಪ್ರಕಟಿಸಲ್ಪಟ್ಟಿವೆ. ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ಸಮುದಾಯವನ್ನು ಅವಹೇಳನಗೊಳಿಸುವ, ಅವಮಾನ ಮಾಡುವ ಅಥವಾ ಖಾಸಗಿ ಹಕ್ಕಿಗೆ ಧಕ್ಕೆ ತರುವ ಉದ್ದೇಶ ಇಲ್ಲ.

ಸುದ್ದಿ ಹಾಗೂ ಜಾಹೀರಾತುಗಳಿಗಾಗಿ ಸಂಪರ್ಕಿಸಿರಿ
8660146563



# ಸಿರುಗುಪ್ಪ : ಸಿಡಿಲು ಬಡಿದು 9 ಕುರಿಗಳ ಸಾವು

ಸಿರುಗುಪ್ಪ,ಮಾ.20-

ತಾಲೂಕಿನ ಮುದೇನೂರು ಗ್ರಾಮದಲ್ಲಿ ಬಿರುಗಾಳಿ ಸಿಡಿಲು ಗುಡುಗು ಮಿಂಚು ಆಲಿಕಲ್ಲು ಮಳೆ ಮಂಗಳವಾರ ಸಿಡಿಲು ಬಡಿಲು 9 ಕುರಿಗಳು ಸಾವಿಗೀಡಾಗಿವೆ ಬಿರುಗಾಳಿಯಿಂದಾಗಿ ಸಿರುಗುಪ್ಪ ತಾಲೂಕಿನಲ್ಲಿ ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿದ್ದು ಜೆಸ್ಕಾಂನಿಂದ ವಿದ್ಯುತ್ ಕಂಬ ಅಳವಡಿಕೆಗೆ ಕ್ರಮ ಕೈಗೊಳ್ಳಲಾಯಿತು ಸಿರುಗುಪ್ಪ ತಾಲೂಕಿನಲ್ಲಿ 6.9 ಮಿಲಿ ಮೀಟರ್ ಮಳೆಯಾದ ವರದಿ ಸಿರುಗುಪ್ಪ 9.2 ಮಿಲಿಮೀಟರ್ ಮಳೆಯಾಗಿದೆ ತೆಕ್ಕಲಕೋಟೆ 8.8 ಮಿಲಿ ಮೀಟರ್ ಮಳೆಯಾಗಿದೆ ಸಿರಿಗೇರಿ 3.4 ಮಳೆಯಾಗಿದೆ ಮಿ. ಮೀ ಮಣ್ಣೂರು ಸೂಗೂರು 8.8 ಮಿಲಿ ಮೀಟರ್ ಮಳೆಯಾಗಿದೆ ಹಚ್ಚೊಳ್ಳಿ 8.2 ಮಿಲಿ ಮೀಟರ್ ಮಳೆಯಾಗಿದೆ ಕರೂರು 1.26 ಮಿ ಮೀ ಮಳೆಯಾಗಿದೆ ಬಿಸಿಲಿನಿಂದ ಕೆಂಗಿಟ್ಟಿದ್ದ ಸಿರುಗುಪ್ಪ ತಾಲೂಕಿನ ಜನರಿಗೆ ಸೋಮವಾರ ಮಂಗಳವಾರ ಸಂಜೆ ಸುರಿದ ಮಳೆಯಿಂದಾಗಿ ಸಿರುಗುಪ್ಪ ತಾಲೂಕು ತಂಪಾಗಿದೆ ಇದರಿಂದ ರೈತಪಿ ವರ್ಗಕ್ಕೂ ಖುಷಿ ತಂದಿದೆ ರೈತರ ಮುಖದಲ್ಲಿ ಮಂದಹಾಸ ಮೂಡಿದೆ ರೈತರ ಕೃಷಿ ಬದುಕಿಗೆ ಹಾಗೂ ದನ ಕರುಗಳಿಗೆ ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರು ದೊರೆಯದಂತಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಅಬ್ದುಲ್ ನಬಿ ಅವರು ಅಭಿಪ್ರಾಯಪಟ್ಟರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

# ಸಿರುಗುಪ್ಪ: ಆಲಿಕಲ್ಲು ಮಳೆಯಿಂದ 200 ಎಕರೆ ಭತ್ತದ ಬೆಳೆ ನಾಶ

ಸಿರುಗುಪ್ಪ - ದೇಶನೂರಿನ ವಿನಾಯಕ ನಗರ ಆಲಿಕಲ್ಲು ಮಳೆ ಅಬ್ಬರಕ್ಕೆ ಸುಮಾರು 200 ಎಕರೆ ಭತ್ತದ ಬೆಳೆ ಕಬ್ಬು ಬಾಳೆ ತೆಂಗು ಮುಖ್ಯವಾಗಿ ಭತ್ತದ ಬೆಳೆ ನಾಶವಾಗಿದೆ ಗುಡಿಸಲು ತಗಡಿನ ಛಾವಣಿಗಳು ಗಾಳಿಗೆ ಹಾರಿ ಹೋಗಿವೆ ಮರಗಳು ವಿದ್ಯುತ್ ಕಂಬಗಳ ಮೇಲೆ ಬಿದ್ದ ಪರಿಣಾಮ ವಿದ್ಯುತ್ ಸಂಪರ್ಕ ಕಡಿತ ದೇಶನೂರು ಗ್ರಾಮ ಪಂಚಾಯತ್ ನ ವಿನಾಯಕ ನಗರ ಕ್ಯಾಂಪ್ ನಲ್ಲಿ ಕಂಡ ಸೋಮವಾರ ಮಂಗಳವಾರ ಸುರಿದ ಧಾರಕಾರ ಮಳೆ ಬಿರುಗಾಳಿ ಗುಡುಗು



ಸಿಡಿಲು ಮಿಂಚು ಆಲಿಕಲ್ಲು ಮಳೆಗೆ ಮಳೆಯ ಅಬ್ಬರಕ್ಕೆ ಬೆಳೆ ಹಾನಿಯಾಗಿದೆ ಬೆಳೆ ಹಾನಿ ಆಲಿಕಲ್ಲು ಮಳೆ ಗಾಳಿಗೆ ಹಾನಿಗೊಳಗಾದ ಭತ್ತದ ಬೆಳೆ ಜಮೀನುಗಳಿಗೆ ವಿನಾಯಕ ನಗರ ಕ್ಯಾಂಪ್ ಗೆ ಭೇಟಿ ನೀಡಿದ ಕಂದಾಯ ಇಲಾಖೆ ಕೃಷಿ ಇಲಾಖೆಯ ಗ್ರಾಮ ಆಡಳಿತ ಅಧಿಕಾರಿ ಎಂ ರಾಮಪ್ಪ ಕೃಷಿ ಅಧಿಕಾರಿ ಎ ಓ ಪುರುಷೋತ್ತಮ ಅವರು ಸರ್ವೆ ನಂಬರ್ 416 / ಎ12, 416 /1 ಬಿ1, 416 /1, 417/ ಡಿ, 377/ಸಿ, 377/ಬಿ, 370 ಸಾಮಾಜಿಕ ಕಾರ್ಯಕರ್ತರು ಜನಾಭಿಪ್ರಾಯ ಮುಖಂಡರಾದ ಅಬ್ದುಲ್ ನಬಿ ರೈತರಾದ ದೇಶನೂರು ಯಂಕಣ್ಣ, ಹಚ್ಚೋಳಿ ಮಂಜುನಾಥ,ಹಚ್ಚೋಳ್ಳಿ ಯೋಗೇಶ, ಹಚ್ಚೋಳ್ಳಿ ಚಂದ್ರಪ್ಪ, ದೇವೇಂದ್ರ, ವೆಂಕಟರಮಣ, ವೀರೇಶ, ಸಿ ಹೆಚ್ ಗೋಪಾಲಕೃಷ್ಣ, ಬಾಬಯ್ಯ, ವೇಣುಗೋಪಾಲ, ಪಾಂಡುರಂಗ ಮತ್ತಿತರ ರೈತರು ಇದ್ದರು ಬೆಳೆ ಹಾನಿಗೆ ಸರ್ಕಾರದಿಂದ ಪರಿಹಾರ ನೀಡುವಂತೆ ರೈತರು ಮನವಿ ಮಾಡಿದರು ಗ್ರಾಮ ಆಡಳಿತ ಅಧಿಕಾರಿ ಎಂ ರಾಮಪ್ಪ, ಕೃಷಿ ಅಧಿಕಾರಿ ಎ ಓ ಪುರುಷೋತ್ತಮ ಅವರು ಭತ್ತದ ಬೆಳೆಗಳ ಸಮೀಕ್ಷೆ ನಡೆಸಿದರು ರೈತರಿಂದ ಮಾಹಿತಿ ಪಡೆದರು ರೈತರ ಮನವಿ ಸ್ವೀಕರಿಸಿದ ಅವರು ಇಲ್ಲಿನ ಹಾನಿಯಾದ ವರದಿಯನ್ನು ಸರಕಾರಕ್ಕೆ ಕಳುಹಿಸಲಾಗುವುದು ನಂತರ ಸರ್ಕಾರದಿಂದ ಪರಿಹಾರ ಘೋಷಿಸಿದರೆ ರೈತರಿಗೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು .

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR